
# ಹೆಚ್.ಜಿ. ಸೋಮಶೇಖರರಾವ್



ಟಿ.ಆರ್. ಮಹಾದೇವಯ್ಯ

ರಂಗಸಂಪನ್ನರು ಮಾಲಿಕೆ : ೨೩

# ಹೆಚ್. ಜಿ. ಸೋಮಶೇಖರರಾವ್

ಡಾ. ಟಿ. ಆರ್. ಮಹಾದೇವಯ್ಯ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

**H. G. SOMASHEKHARA RAO** : A Monograph in Kannada by
Dr. T. R. Mahadevaiah
Near Siddhaganga Kalyana Mantapa, Munjunath Nagar,
Bangalore - 560 010
Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

Chief Editor : C. G. Krishnaswamy
Editors : Dr. Siddhaling Pattanshetti
K. V. Nagaraja Murthy,
T. Raghu, Hooli Shekhar
First Impression : March, 2001
Pages : 44
Cover Design : Krishna Raichur
© Author
Printed by
Manohar Printing Press, Market, Dharwad - 580 001
Ph : 0836 – 790030
Price : Rs. 30/-

•

**ಹೆಚ್. ಜಿ. ಸೋಮಶೇಖರರಾವ್**: ರಂಗಸಂಪನ್ನರ ಕಿರು ಜೀವನಚರಿತ್ರೆ
ಲೇಖಕರು : ಡಾ. ಟಿ. ಆರ್. ಮಹಾದೇವಯ್ಯ
ಪ್ರಕಾಶನ : ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೦೨
ಪ್ರಧಾನ ಸಂಪಾದಕರು : ಸಿ. ಜಿ. ಕೃಷ್ಣಸ್ವಾಮಿ
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ
ಕೆ. ವಿ. ನಾಗರಾಜಮೂರ್ತಿ,
ಟಿ. ರಘು, ಹೂಲಿ ಶೇಖರ್
ಪ್ರಥಮ ಮುದ್ರಣ : ಮಾರ್ಚ್, ೨೦೦೧
ಮುದ್ರಣ : ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್
ಧಾರವಾಡ - ೫೮೦ ೦೦೧
ಬೆಲೆ : ರೂ. ೩೦/-

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷಮುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧. ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್, ೨೦. ಗಜಾನನ ಮಹಾಲೆ, ೨೧. ಎಚ್. ಟಿ. ಅರಸು, ೨೨. ಕೆ. ಅಮಿನ ಪೇಂಟರ್ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು

ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಹೆಚ್. ಜಿ. ಎಸ್. ಎಂದೇ ಖ್ಯಾತರಾಗಿರುವ ಹರಿಹರ ಗುಂಡಣ್ಣ ಸೋಮಶೇಖರರಾವ್ ಅವರನ್ನು ಕುರಿತು ಡಾ. ಟಿ. ಆರ್. ಮಹಾದೇವಯ್ಯ ಅವರು ಬರೆದ ಪುಸ್ತಕ. ಸೋಮಶೇಖರರಾವ್ ಅವರು ಹುಟ್ಟು ಕಲಾವಿದರು. ಈಗಿನ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಿಂದ ಪ್ರವಾಸ ಹೊರಟ ಅವರ ಕುಟುಂಬದ ಎಳೆಗಳು ಈಗ ನಾಡಿನ ತುಂಬ ಪ್ರಸರಿಸವೆ. ಮೈಸೂರಿನ ಮಹಾರಾಜಾ ಕಾಲೇಜಿನ ಸಾಂಸ್ಕೃತಿಕ ಸಂಪತ್ತನ್ನು ಬೆಳೆಸಿದ ಪ್ರಸಿದ್ಧ ಕಲಾವಿದರಲ್ಲಿ ಸೋಮಶೇಖರರಾವ್ ಕೂಡ ಒಬ್ಬರು. ಬ್ಯಾಂಕ್ ಉದ್ಯಮಿಯಾಗಿ ಅಲ್ಲಿಯ ಅರ್ಥವನ್ನು ವ್ಯವಸ್ಥೆಯಿಂದ ಕಾಪಾಡಿದ ರಾವ್ ಅವರು ತಮ್ಮ ಹವ್ಯಾಸವನ್ನು ರಂಗಭೂಮಿಯ ಮೇಲೆ ಬೆಳೆಸಿಕೊಂಡು ಅಭಿನಯ ಕಲೆಯ ಅರ್ಥಕ್ಕೂ ಒಂದು ನಿಶ್ಚಿತ ವ್ಯವಸ್ಥೆಯನ್ನು ತಂದು ಕೊಟ್ಟಿದ್ದಾರೆ. ಮುನ್ನೂರಕ್ಕಿಂತ ಹೆಚ್ಚು ನಾಟಕಗಳಲ್ಲಿ ಪೋಷಕ - ಪ್ರಧಾನ ಎಲ್ಲ ಬಗೆಯ ಪಾತ್ರಗಳನ್ನು ತುಂಬ ಯಶಸ್ವಿಯಾಗಿ ನಿರ್ವಹಿಸಿದ ಸೋಮಶೇಖರರಾವ್ ಚಲನಚಿತ್ರ ಹಾಗೂ ಕಿರುತೆಯ ರಂಗದಲ್ಲೂ ಯಶಸ್ವಿ ನಟರೆನಿಸಿದ್ದಾರೆ, ಹಲವಾರು ಧಾರಾವಾಹಿಗಳಲ್ಲಿ ನಟಿಸಿ ಜನಪ್ರೀತಿ ಗಳಿಸಿದ ರಾವ್ ಅವರು ಒಬ್ಬ ನಿಗರ್ವಿ, ಆದರ್ಶಪ್ರಾಯ ಕಲಾವಿದ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ., ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ–ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು
೧೦-೨-೨೦೦೧

ಸಿದ್ಧಲಿಂಗ ಪಟ್ಟಣಶೆಟ್ಟಿ
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


೧. ಪೀಠಿಕೆ ೯

೨. ವೃತ್ತಿ ಜೀವನ ೧೭

೩. ಸಂಸಾರ ೧೮

೪. ಪ್ರವೃತ್ತಿ ಜೀವನ : ನಾಟಕರಂಗ ೨೦

೫. ಚಲನಚಿತ್ರ ರಂಗ ೨೮

೬. ದೂರದರ್ಶನ ಧಾರಾವಾಹಿಗಳು ೩೦

೭. ಪ್ರಶಸ್ತಿ - ಪುರಸ್ಕಾರಗಳು ೩೦

೮. ಸಂದರ್ಶನ : ಪ್ರಶ್ನೋತ್ತರ ೩೧

## ಪೀಠಿಕೆ

ಕನ್ನಡ ನಾಡು ವೀರರ, ತ್ಯಾಗವೀರರ ತವರಾಗಿರುವಂತೆಯೇ ಕವಿಕಲಾವಿದರ ಬೀಡಾಗಿದೆ. ಲಲಿತಕಲೆಗಳಲ್ಲಿ ರಮಣೀಯವೆನಿಸಿದ ನಾಟಕಕಲೆಯ ಶ್ರೀಮಂತಿಕೆಯನ್ನು ಹಚ್ಚಿಸಿದ ಅನೇಕ ಕಲಾಶ್ರೇಷ್ಠರು ನಮ್ಮಲ್ಲಿ ಆಗಿಹೋಗಿದ್ದಾರೆ. ಅತ್ಯಂತ ಪ್ರಾಚೀನವಾದ ಈ ಜೀವಂತ ಕಲೆಗಾಗಿ ತಮ್ಮ ಇಡೀ ಜೀವಿತವನ್ನೆ ಮುಡುಪಿಟ್ಟ ರಂಗಸಂಪನ್ನರಿದ್ದಾರೆ. ಅವರು ನಾಟಕರಂಗದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಅದನ್ನು ಕಾಲೋಚಿತಗೊಳಿಸಿದ್ದಾರೆ. ನಾಡಿನ ಉದ್ದಗಲವಷ್ಟೇ ಅಲ್ಲ ಹೊರ ದೇಶಗಳಲ್ಲೂ ನಾಟಕಗಳನ್ನು ಆಡಿ ಪರಭಾಷಿಕರ ಮನವನ್ನೂ ಗೆದ್ದಿದ್ದಾರೆ; ಕನ್ನಡದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ.

ನಮ್ಮ ರಂಗಭೂಮಿಯ ಧ್ರುವ ತಾರೆಗಳೆನಿಸಿದ ನಾಟ್ಯಶಿರೋಮಣಿ ವರದಾಚಾರ್, ಮಹಮ್ಮದ್ ಪೀರ್, ಶೇಷಾಚಾರ್, ಹಿರಣ್ಣಯ್ಯ, ಸುಬ್ಬಯ್ಯ ನಾಯಿಡು-ಲಕ್ಷ್ಮೀದೇವಿ, ನಾಟಕರತ್ನ ಗುಬ್ಬಿವೀರಣ್ಣ-ಜಯಮ್ಮ, ಬಳ್ಳಾರಿ ರಾಘವ, ಏಣಗಿ ಬಾಳಪ್ಪ, ಚಿಂದೋಡಿ ಸಹೋದರರು ಮೊದಲಾದವರನ್ನು ಇಲ್ಲಿ ನೆನೆಯಬಹುದು. ನಾಟಕ ಕಲೆಯ ಪ್ರಸಾರಕ್ಕೆಂದೇ ಅನೇಕ ವೃತ್ತಿಪರ ನಾಟಕ ಮಂಡಳಿಗಳು ಹುಟ್ಟಿಕೊಂಡು ನಾಡಿನ ಒಳ-ಹೊರಗೆ ನಾಟಕವಾಡಿ ಜನರ ಅಪಾರ ಮೆಚ್ಚಿಗೆ ಗಳಿಸಿದವು. ಚಲನಚಿತ್ರ, ದೂರದರ್ಶನಗಳು ಬರುವ ತನಕ ನಾಟಕಗಳೇ ನಮ್ಮ ಜನರ ಮನರಂಜನೆಯ ಮತ್ತು ಸಾಮೂಹಿಕ ಶಿಕ್ಷಣದ ಸಾಧನವಾಗಿ ಇದ್ದವು ಎಂಬುದನ್ನು ನಾವು ಮರೆಯುವಂತಿಲ್ಲ.

ವೃತ್ತಿ ರಂಗಭೂಮಿಯ ಚಟುವಟಿಕೆಗಳ ಜೊತೆಗೇ ಅರೆವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗ ಕಲಾವಿದರು ತಂಡಗಳನ್ನು ಕಟ್ಟಿ ಕಲಾರಾಧನೆಗೆ ತೊಡಗಿದವು. ಊರೂರುಗಳಲ್ಲಿ ಜಾತ್ರೆ, ರಥೋತ್ಸವ ಮೊದಲಾದ ಸಂದರ್ಭಗಳಿಗೆ ಹೊಂದಿಕೊಂಡಂತೆ ನಾಟಕಗಳನ್ನು ಕಲಿತು ಆಡುತ್ತಿದ್ದರು. ಶಾಲಾಕಾಲೇಜುಗಳ ವಾರ್ಷಿಕೋತ್ಸವ ಮೊದಲಾದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಂದ ನಾಟಕ ಆಡಿಸುವ ಪರಿಪಾಠ ನಡೆದುಬಂದಿದೆ. ಇದಲ್ಲದೆ ನಗರಗಳಲ್ಲಿ ಸಂಘ-ಸಂಸ್ಥೆಗಳು ತಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ

ನಾಟಕಗಳನ್ನು ಪ್ರದರ್ಶಿಸುವುದೂ ಉಂಟು. ಕೆಲವು ಮಠ ಮೊದಲಾದ ಧಾರ್ಮಿಕ ಸಂಸ್ಥೆಗಳೂ ನಾಟಕ ಮಂಡಳಿಗಳನ್ನು ರಚಿಸಿ. ಆ ಮೂಲಕ ರಂಗ ತರಪೇತಿ ಕೊಟ್ಟು ನಾಟಕಗಳನ್ನು ಆಡಿಸುವುದು ಉಂಟು. ಹೀಗೆ ನಾಟಕವು ಅಪಾರ ಜನಪ್ರಿಯತೆ ಗಳಿಸಿರುವ ಅಭಿನಯ ಕಲಾಮಾಧ್ಯಮವಾಗಿದೆ. ಸರ್ಕಾರ ಈ ಕಲೆಗೆ ಸೂಕ್ತ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇದರ ಅಭಿವೃದ್ಧಿಗಾಗಿಯೇ ಒಂದು ಪ್ರತ್ಯೇಕ ಅಕಾಡಮಿಯನ್ನು ಸ್ಥಾಪಿಸಿದೆ. ನಾಟಕ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ ಅವರಿಗೆ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಪ್ರೋತ್ಸಾಹಿಸುವ ಸ್ತುತ್ಯ ಕಾರ್ಯವೂ ಸಹ ನಡೆಯುತ್ತಿದೆ.

ಸ್ವಾರಸ್ಯದ ಮಾತೆಂದರೆ ಸರ್ಕಾರದಲ್ಲಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಕೂಡ ರಂಗಭೂಮಿಯ ಸಂಪರ್ಕವಿಟ್ಟುಕೊಂಡು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದಾರೆ; ಚಲನಚಿತ್ರಗಳಲ್ಲೂ ಅಭಿನಯಿಸುತ್ತಿದ್ದಾರೆ. ವೃತ್ತಿ-ಪ್ರವೃತ್ತಿಗಳೆರಡನ್ನೂ ಸಮಸಮವಾಗಿ ಕೊಂಡೊಯ್ಯುವ ಜೋಕೆತೂಕದ ನಡೆ ಅವರದು. ಅಂಥ ಅಪರೂಪದ ರಂಗಕಲಾವಿದರಲ್ಲಿ ಹೆಚ್. ಜಿ. ಸೋಮಶೇಖರರಾವ್ ಅವರೂ ಒಬ್ಬರು.

ಯಾವುದೇ ವ್ಯಕ್ತಿಯ ವ್ಯಕ್ತಿತ್ವವು ರೂಪುಗೊಳ್ಳಲು ಹಲವಾರು ಅಂಶಗಳು ಕಾರಣವಾಗುತ್ತವೆ. ಹುಟ್ಟಿನಿಂದ ರಕ್ತದಲ್ಲೇ ಆನುವಂಶಿಕವಾಗಿ ಕೆಲವು ಗುಣಗಳು ಬರುತ್ತವೆ. ಅವನು ಬೆಳೆಯುತ್ತಿರುವ ಕುಟುಂಬದ ಸನ್ನಿವೇಶ, ಸಮಾಜದ ವಾತಾವರಣ, ಆತನ ಜೀವನದಲ್ಲಿ ನಡೆದ ಘಟನೆಗಳು, ಸಂಪರ್ಕ ಹೊಂದಿದ ವ್ಯಕ್ತಿಗಳು ಅವನ ವ್ಯಕ್ತಿತ್ವದ ಮೇಲೆ ಗಾಢ ಪರಿಣಾಮ ಬೀರುತ್ತಾರೆ. ಯಾವ ಪ್ರಭಾವಕ್ಕೂ ಒಳಗಾಗದ ಕೆಲವು ಜಡ ಜೀವಿಗಳಿರುತ್ತಾರೆ. ಏನನ್ನೂ ಸಾಧಿಸದೆ, ಯಾರ ಗಮನಕ್ಕೂ ಬರದೇ ಸ್ವಾರ್ಥಕೇಂದ್ರಿತ ಬದುಕನ್ನು ನಡೆಸಿ ಹೋಗುತ್ತಾರೆ. ಇಂಥವರು ಇತಿಹಾಸದ ಕಕ್ಷೆಯಿಂದ ಹೊರತು. ಲೋಕಾರ್ಪಿತಗೊಂಡ ಬದುಕಿನ ಕೆಲವರಿರುತ್ತಾರೆ. ಅವರ ಬದುಕು ನಾಡಿನ ಇತಿಹಾಸದೊಡನೆ ಬೆರೆತು ಹೋಗಿರುತ್ತದೆ. ಏಕೆಂದರೆ ಅವರು ನಾಡಿಗೆ, ನುಡಿಗೆ, ಸಂಸ್ಕೃತಿಗೆ ಸದಾ ಏನನ್ನಾದರೂ ಕೂಡಿಸಬೇಕೆಂಬ ತವಕದವರು. ಸೂಕ್ಷ್ಮ ಸಂವೇದನಾ ಶೀಲರಾದ ಅವರು ದೈವದತ್ತವಾಗಿ ಬಂದ ಕಲೆಯನ್ನು ಜನಮನವನ್ನು ಸಂತೋಷಗೊಳಿಸಲು ಬಳಸುತ್ತಾರೆ. ಅವರು ಒಂದು ರೀತಿಯಲ್ಲಿ ನಮ್ಮ ನಾಡಿನ ಸಾಂಸ್ಕೃತಿಕ ಹರಿಕಾರರು. ಕಲಾಸೇವೆಗೆ ತಮ್ಮ ಪ್ರಕೃತಿಯನ್ನು ಮೀಸಲಿಟ್ಟವರು; ಅದರ ಶ್ರೀಮಂತಿಕೆಯನ್ನು ಹೆಚ್ಚಿಸಿದವರು ಸೋಮಶೇಖರರಾವ್ ಅಂಥವರು. ಅವರ ಬದುಕಿನ ನಡೆಯಲ್ಲಿ ನಮ್ಮ ಹವ್ಯಾಸಿ ರಂಗಭೂಮಿಯ ಸಾಧನೆಯ ಹೆಜ್ಜೆಗಳನ್ನು, ನಮ್ಮ ರಂಗ ಪ್ರಯೋಗಗಳ ಸಫಲಾಸಫಲತೆಗಳನ್ನು ಕಾಣಲು ಸಾಧ್ಯ.

ಹೆಚ್. ಜಿ. ಸೋಮಶೇಖರರಾವ್ ರಂಗ ವಲಯದಲ್ಲಿ, ಆತ್ಮೀಯ ಬಳಗದಲ್ಲಿ 'ಸೋಮಣ್ಣ'ನೆಂದು ಕರೆಸಿಕೊಂಡವರು. ಸಹಪಾಠಿ ಎಂಬ ಸಲುಗೆಯಲ್ಲಿ ಇನ್ನು ಮುಂದೆ ನಾನೂ ಹಾಗೇ ಕರೆಯುತ್ತೇನೆ.

ಸೋಮಣ್ಣನ ಹಿರೀಕರು ಎಲ್ಲಿಂದಲೋ ವಲಸೆ ಬಂದು ಆಗಿನ ಧಾರವಾಡ ಈಗಿನ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ನೆಲೆಸಿದರು. ಅಲ್ಲಿ ಭೂಮಿಕಾಣಿ ಮಾಡಿ, ಲೇವಾದೇವಿ ನಡೆಸಿ ಭಾರೀ ಶ್ರೀಮಂತರಾದರು. ಆ ವಂಶದವರು ತಮ್ಮ ಹೆಸರಿನ ಮೊದಲಿಗೆ 'ಸಾಹುಕಾರ್' ಪದ ಸೇರಿಸಿಕೊಂಡರು. ಆ ವಂಶದ ಯಾರೋ ಶಿವಾಜಿ ಸೈನ್ಯದ ಒಂದು ತುಕಡಿಯ ಮುಖಂಡರಾಗಿದ್ದರಿಂದ 'ನಾಯಕ' ಎಂಬ ಬಿರುದೂ ಸೇರಿತ್ತು. ಸೋಮಣ್ಣನ ತಾತ ಸಾಹುಕಾರ್ ರಾಮಣ್ಣ ನಾಯಕ್ ಒಬ್ಬ ಧೀಮಂತ ವ್ಯಕ್ತಿ, ಮಹಾಸ್ವಾಭಿಮಾನಿ. ತಂದೆ ಹರಿಹರ ಗುಂಡೂರಾವ್ (ಗುಂಡಣ್ಣ) ಏಕೈಕ ಪುತ್ರ, ತಲೆಮಾರುಗಳು ಕೂತು ತಿಂದರೂ ಕರಗದ ಆಸ್ತಿಯೊಡೆಯರಾಗಿ ಬಂದರು. ಆದರೆ ಯಾಕೋ ಏನೋ ಸಿರಿವಂತಿಕೆ ಬಹಳ ಕಾಲ ಉಳಿಯಲಿಲ್ಲ. ಕರಗುತ್ತಾ ಬಂತು. ಅದು ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲ. ಗುಂಡಣ್ಣ ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಖಾದೀಧಾರಿಯಾಗಿ ಚರಕದಲ್ಲಿ ನೂಲು ತೆಗೆಯುತ್ತಾ ಚಳುವಳಿ ನಡೆಸುತ್ತಾ ಜನರನ್ನು ಜಾಗೃತಗೊಳಿಸುವಲ್ಲಿ ತನ್ಮಯರಾದರು. ಇದೇ ವೇಳೆಗೆ ಚಿತ್ರದುರ್ಗದ ಕೃಷ್ಣರಾಯರ ಮಗಳು ವೆಂಕಮ್ಮನವರೊಡನೆ ಮದುವೆಯಾಯಿತು. ರಾಣೆಬೆನ್ನೂರಿನಿಂದ ಚಿತ್ರದುರ್ಗಕ್ಕೆ ಓಡಾಡಿಕೊಂಡಿದ್ದ ಅವರು ಕೊನೆಗೆ ಮನೆಯಳಿಯನಾಗಿ ಚಿತ್ರದುರ್ಗದಲ್ಲೇ ನೆಲೆಸಿದರು. ಉತ್ತರ ಕರ್ನಾಟಕದ ಗಂಡು ಹಳೇ ಮೈಸೂರಿನ ಹೆಣ್ಣು - ಈ ಸಂಬಂಧ ಏಕೀಕರಣವನ್ನು ಸಾಧಿಸಿತ್ತು !

ಗುಂಡಣ್ಣ ಪ್ರಾಮಾಣಿಕತೆಗೆ, ನಿಸ್ಪೃಹತೆಗೆ ಹೆಸರಾದವರು. ಸುತ್ತಮುತ್ತ ಈ ಭ್ರಷ್ಟಸಮಾಜವನ್ನು ಕಂಡು ಅವರು ಹೇಸಿದರು. ತಾವು ಕೆಲಸದಲ್ಲಿದ್ದ ಕಚೇರಿಯಲ್ಲಿ ಏಗಲಾರದೆ, ಕೆಲಸ ಬಿಟ್ಟುಬಂದು ಪ್ಲೀಡರ್ ಪರೀಕ್ಷೆ ಪಾಸು ಮಾಡಿ ವಕೀಲಿ ವೃತ್ತಿ ಹಿಡಿದರು. ಅಷ್ಟೇ ಅಲ್ಲ, ತಮ್ಮ ಚಟುವಟಿಕೆಗಳಿಂದ ಚಿತ್ರದುರ್ಗದ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾದರು. ಅವರು ತಿಲಕ್ ಸಂಘ ಸ್ಥಾಪಿಸಿ ಮೆರವಣಿಗೆ, ನಾಟಕ, ಹರಿಕಥೆ, ಉಪನ್ಯಾಸ ಮೊದಲವುಗಳ ಮೂಲಕ ಜನರಿಗೆ ತಿಳಿವಳಿಕೆ ನೀಡಿ ಚಳವಳಿಗೆ ಚಾಲನೆ ನೀಡಿದರು.

ಗುಂಡಣ್ಣ ವೆಂಕಮ್ಮನವರಿಗೆ ೬ ಗಂಡು, ೨ ಹೆಣ್ಣು ಮಕ್ಕಳು : ೧. ವೆಂಕಟೇಶ್ ೨. ಸೂರ್ಯನಾರಾಯಣರಾವ್ ೩. ಶಂಕರ್ (ಪ್ರತಿಭಾಶಾಲಿ ಹುಡುಗ ಚಿಕ್ಕಂದಿನಲ್ಲೇ

ತೀರಿಕೊಂಡನು) ೪. ಸೋಮಶೇಖರರಾವ್ ೫. ಕೃಷ್ಣಮೂರ್ತಿ ೬. ದತ್ತಾತ್ರೇಯ (ದತ್ತಣ್ಣ) ೭. ಗಿರಿಜಮ್ಮ ೮. ರಾಜ್ಯಲಕ್ಷ್ಮಿ.

ವೆಂಕಟೇಶ್ ರ್‍ಯಾಂಕ್ ವಿದ್ಯಾರ್ಥಿ, ಹಾಡುಗಾರ, ನಟ, ಪ್ರಾಧ್ಯಾಪಕ. ಸೂರ್ಯನಾರಾಯಣರಾವ್ ಕೂಡ ರ್‍ಯಾಂಕ್ ವಿದ್ಯಾರ್ಥಿ, ಇಂಗ್ಲಿಷ್ ಪ್ರಾಧ್ಯಾಪಕ, ಸೋಮಶೇಖರರಾವ್ ಹುಟ್ಟಿದ್ದು ೩-೧೨-೧೯೩೪. ಕೃಷ್ಣಮೂರ್ತಿಯದು ವರ್ಣರಂಜಿತ ಬದುಕು. ಈಗ ಆತ ಅವಧೂತನಂತೆ ದತ್ತಾತ್ರೇಯ ವೃತ್ತಿಯಲ್ಲಿ ಮಿಲಿಟರಿಯ ಇಂಜಿನಿಯರ್, ಪ್ರವೃತ್ತಿಯಲ್ಲಿ ನಾಟಕ ಮತ್ತು ಸಿನಿಮಾ ನಟ. ಹೆಣ್ಣು ಮಕ್ಕಳಲ್ಲಿ ಗಿರಿಜಮ್ಮ ಪದವೀಧರೆ, ಗೃಹಿಣಿ. ರಾಜ್ಯಲಕ್ಷ್ಮಿ ಆದರ್ಶ ಶಿಕ್ಷಕಿ. ಇಬ್ಬರೂ ನಟಿಯರು ಹಾಗೂ ಹಾಡುಗಾರರು.

ಇಂಥ ಪ್ರತಿಭಾವಂತರ ಮನೆತನದಲ್ಲಿ ಹುಟ್ಟಿದ ಸೋಮಣ್ಣ ಚಿಕ್ಕಂದಿನಿಂದಲೂ ತುಂಟ, ಮಹಾತುಂಟ. ಗೆಳೆಯರ ಗುಂಪು ಕಟ್ಟಿಕೊಂಡು ಅಲೆಯುವುದು, ಹರಟೆ ಹೊಡೆಯುವುದು, ಲಗ್ಗೆ ಹಾಕುವುದೇ ಕೆಲಸ. ಬಿಟ್ಟರೆ ಚಿತ್ರದುರ್ಗದ ಗರಡಿ ಮನೆಯಲ್ಲಿ ವ್ಯಾಯಾಮ ಮಾಡುವುದು. ಇಷ್ಟಾದರೂ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಮನೆಗೆ ಸಾಮಾನು ತರುವುದು, ಬಟ್ಟೆ ಒಗೆಯುವುದು. ಕೆಲ ಸಮಯ ಅಡಿಗೆ ಮಾಡುವುದು ಮೊದಲಾದ ಸಂಸಾರದ ಹೊಣೆಯನ್ನು ನಿರ್ವಹಿಸುತ್ತಿದ್ದರು.

ಮನೆಯಲ್ಲಿನ ಮಡಿವಂತಿಕೆ ಸೋಮಣ್ಣನಿಗೆ ಹಿಡಿಸುತ್ತಿರಲಿಲ್ಲ. ಇದಕ್ಕೆ ಕಾರಣ ಎರಡು : ಚಿಕ್ಕಂದಿನಲ್ಲಿ ಆತ ಬೆಳೆದಿದ್ದು ಮನೆಗೆ ನಿಕಟವರ್ತಿಯಾಗಿದ್ದ ಮಕ್ಕಳಿಲ್ಲದ ಬೂಬಮ್ಮನ ಮಡಿಲಲ್ಲಿ, ಅವಳ ಪ್ರೀತಿಯ ಆರೈಕೆಯಲ್ಲಿ. ಇನ್ನು ಒಡನಾಡಿಗಳೆಲ್ಲಾ ಬೇರೆ ಬೇರೆ ಜಾತಿಯವರೆಲ್ಲ ಇದ್ದರು. ಅವರು ಜಾತಿ ಮತಗಳ ಪರಿವೆಯಿಲ್ಲದೆ ಬೆಳೆಯುತ್ತಿದ್ದರು. ಹೀಗಿರುವಾಗ "ಮಡಿ ನೀರು ತಾ" ಎಂದರೆ ಮುಸಲ್ಮಾನರ ಮನೆಯ ನೀರನ್ನು ಒಯ್ದು ಕೊಡುತ್ತಿದ್ದರಂತೆ! ಸೋಮಣ್ಣ ಅಂಥ ಪ್ರಗತಿಪರ ದೃಷ್ಟಿಯನ್ನು ಚಿಕ್ಕಂದಿನಲ್ಲೇ ರೂಢಿಸಿಕೊಂಡಿದ್ದರು.

ಸೋಮಣ್ಣನ ಗೆಳೆಯರ ಬಳಗ ಅನೇಕ ಸಾಹಸ ಕಾರ್ಯಗಳನ್ನು ಮಾಡುತ್ತಲೇ ಇದ್ದರು. ಆಟಕ್ಕೆ ಕೊನೆಯಿಲ್ಲ, ತುಂಟತನಕ್ಕೆ ಮಿತಿಯಿಲ್ಲವೆನ್ನುವಂತಾಯಿತು. ಬೀಡಿ, ಸಿಗರೇಟು ಸೇದುವುದನ್ನೂ ಕಲಿತರು. ಹೋಟೆಲ್‌ಗೆ ಹೋಗುವುದು, ಸಿನಿಮಾ ನೋಡುವುದು ಅಭ್ಯಾಸವಾಯಿತು. ಬಾಲ್ಯದ ದಿನಗಳಲ್ಲಿ ಅದಮ್ಯ ಉತ್ಸಾಹದಿಂದ ಅನೇಕ ಮಂಗತನ ಮಾಡಿ ಹಿರಿಯರಿಂದ ಬೈಗಳು, ಹೊಡೆತ ತಿನ್ನಬೇಕಾಯಿತು.

ಅವರ ಉತ್ಸಾಹವನ್ನು ಹತ್ತಿಕ್ಕುವ ಪ್ರಯತ್ನ ರಬ್ಬರ್ ಚೆಂಡನ್ನು ನೀರಿನೊಳಗೆ ಅದುಮಿಡುವ ವ್ಯರ್ಥ ಸಾಹಸ.

ಸೋಮಣ್ಣ ಮತ್ತು ಅವನ ಗೆಳೆಯರ ತುಂಟಾಟ ಕಂಡು ತಂದೆ ಒಂದು ಕೆಲಸವನ್ನು ಅವರಿಗೆ ವಹಿಸಿದರು. ಅವರ ಹುಡುಗಾಟಿಕೆಯನ್ನು ದೊಡ್ಡ ಆಟಕ್ಕೆ ನಿಯೋಜಿಸುವ ಹುನ್ನಾರು ಅವರದಾಗಿತ್ತು. ಸ್ವಾತಂತ್ರ್ಯ ಚಳುವಳಿ ಕಾವುಗಟ್ಟಿದ ಸಮಯ ಅದಾಗಿತ್ತು. ಬ್ರಿಟಿಶರ ದಬ್ಬಾಳಿಕೆಯನ್ನು ಉಗ್ರವಾಗಿ ಪ್ರತಿಭಟಿಸುವ ಕೆಲಸ ಹಲವು ರೀತಿಯಲ್ಲಿ ನಡೆಯುತ್ತಿತ್ತು. ಕಂಡಕಂಡಲ್ಲೆಲ್ಲಾ ಬ್ರಿಟಿಶರ ಧ್ವಜವನ್ನು ಕೆಳಗಿಳಿಸಿ ಭಾರತ ರಾಷ್ಟ್ರಧ್ವಜವನ್ನು ಹಾರಿಸುವ ಸಾಹಸದಲ್ಲಿ ಚಳುವಳಿಗಾರರು ತೊಡಗಿದರು. ಸರ್ಕಾರೀ ಕಚೇರಿಯ ಮೇಲೆ ಹಾರಾಡುತ್ತಿದ್ದ ಬ್ರಿಟಿಶ್ ಧ್ವಜವನ್ನು ಇಳಿಸಿ ಭಾರತದ ತ್ರಿವರ್ಣ ಬಾವುಟವನ್ನು ಹಾರಿಸುವ ಕೆಲಸವನ್ನು ಈ ಹುಡುಗರ ಗುಂಪಿಗೆ ವಹಿಸಿದರು. ಈ ಗುಂಪಿನ ನಾಯಕ ಸೋಮಣ್ಣ. ಕೇಳಬೇಕೆ ? ಮೊದಲೇ ಸ್ಫೂರ್ತಿಯ ಬುಗ್ಗೆಗಳು. ಕೀಟಲೆಯ ಕಿಡಿಗಳು. "ಭಾರತಮಾತಾ ಕೀ ಜೈ, ಮಹಾತ್ಮಾ ಗಾಂಧೀಜಿ ಕೀ ಜೈ" ಎಂದು ಜೈಕಾರ ಮಾಡುತ್ತಾ ಹೊರಟರು. ಪೋಲೀಸರು ಅವರನ್ನು ತಡೆದು ಅವರ ತುಂಟಾಟಕ್ಕೆ ಬ್ರೇಕ್ ಹಾಕಿದರು. ಇಷ್ಟಾದರೂ ಆ ಹುಡುಗರಲ್ಲಿ ದೇಶಪ್ರೇಮ ಪ್ರಜ್ವಲಿಸಿತ್ತು.

ಮನೆಯಲ್ಲಿ ಅಣ್ಣಂದಿರು ಓದುವುದರಲ್ಲಿ ಎತ್ತಿದ ಕೈ. ಅವರು ಉನ್ನತ ದರ್ಜೆಯಲ್ಲಿ ಪಾಸಾಗುತ್ತಿರುವಾಗ ಸೋಮಣ್ಣನೂ ಬುದ್ಧಿವಂತನಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಮನೆಯಲ್ಲಿ ಎಲ್ಲರೂ ಸೋಮಣ್ಣನನ್ನು ದಂಡಿಸುವವರೇ. ಬಯ್ದರೆ ಬಾಯಿ ನೋವು, ಹೊಡೆದರೆ ಕೋಲು ಮುರಿಯಿತು. ಅಷ್ಟೇ. ಹುಡುಗನಿಗೆ ಮನೆ ಪಾಠ ಗೊತ್ತು ಮಾಡಿದರು. ಆದರೆ ಏನೂ ಸುಧಾರಣೆ ಆಗಲಿಲ್ಲ. ಪಾಠಕ್ಕೆ ಚಕ್ಕರ್, ಓದು ಸೊನ್ನೆ !

ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ವೆಂಕಟೇಶ್‌ಗೆ ಭೌತಶಾಸ್ತ್ರ ಅಧ್ಯಾಪಕರಾಗಿ, ಸೂರ್ಯನಾರಾಯಣರಾವ್‌ಗೆ ಇಂಗ್ಲಿಶ್ ಅಧ್ಯಾಪಕನಾಗಿ ಕೆಲಸ ಸಿಕ್ಕಿದ್ದರಿಂದ ಸಂಸಾರ ಮೈಸೂರಿಗೆ ಬಂತು. ಸೋಮಣ್ಣ ಮೈಸೂರಿನಲ್ಲಿ ಹೈಸ್ಕೂಲು ಸೇರಿದರು. ಆದರೆ ಸ್ವಲ್ಪ ಕಾಲದಲ್ಲೇ ಅಣ್ಣಂದಿರಿಬ್ಬರೂ ಬೇರೆ ಕಡೆ ನೇಮಕಗೊಂಡಿದ್ದರಿಂದ ಸಂಸಾರ ಮತ್ತೆ ಚಿತ್ರದುರ್ಗಕ್ಕೆ ಮರಳಿತು. ಸೋಮಣ್ಣ ದುರ್ಗದಲ್ಲಿಯೇ ಎಸ್. ಎಸ್. ಎಲ್. ಸಿ. ಓದಿ ೧೯೫೧ ರಲ್ಲಿ ಪಾಸು ಮಾಡಿದರು. ಆದರೆ ಮುಂದೆ ಕಾಲೇಜು ಸೇರಲಾಗಲಿಲ್ಲ. ಒಂದು ವರ್ಷ ಖಾಲಿ ಉಳಿದರು. ಆದರೆ

ಇತರ ಚಟುವಟಿಕೆಗಳು ಜಾಸ್ತಿಯಾದವು. ಮನೆಗೆಸಲವೂ ಇತ್ತು. ಇದಲ್ಲದೆ ಪುಸ್ತಕ ಭಂಡಾರದಲ್ಲಿ ಕೂತು ಗ್ರಂಥಾಧ್ಯಯನ ಮಾಡಿದರು.

ಒಂದು ಕಾಲಕ್ಕೆ ಸಿರಿವಂತರಾಗಿ ಮೆರೆದ ಮನೆತನ ಬಡತನದ ಬೇಗೆಯನ್ನು ಅನುಭವಿಸುತ್ತಿತ್ತು. ತಲೆತಲಾಂತರದಿಂದ ಬಂದ ಹಬ್ಬಹರಿದಿನ, ಸಂಪ್ರದಾಯದ ಆಚರಣೆಗಳನ್ನು ನಡೆಸಲು ಸೋಮಣ್ಣನ ತಾಯಿ ಪಡುತ್ತಿದ್ದ ಬವಣೆ ಅಷ್ಟಿಷ್ಟಲ್ಲ. ಮನೆಯಲ್ಲಿದ್ದ ಬೆಳ್ಳಿತಟ್ಟೆ ಮಾರಿ ಇಂಥವನ್ನು ನಡೆಸಿದ ಆ ಮಹಾ ಸಾಧ್ವಿ ಕುಟುಂಬದ ಗೌರವವನ್ನು ಕಾಪಾಡುತ್ತಿದ್ದರು. ತಾಯಂದಿರ ತ್ಯಾಗ ಜೀವನಕ್ಕೆ ಇಂಥವು ಮಾದರಿಯಾಗುತ್ತವೆ.

ಮಾರನೆಯ ವರ್ಷ ಸೋಮಣ್ಣ ಕಾಲೇಜು ಸೇರಿ ಓದು ಮುಂದುವರಿಸಬೇಕೆಂದು ತೀರ್ಮಾನಿಸಿದರು. ಪರಿಣಾಮವಾಗಿ ಅವರು ಎರಡು ವರ್ಷ ಇಂಟರ್‌ಮೀಡಿಯಟ್ ಓದುವಂತಾಯಿತು. ವಿಷಯದ ಆಯ್ಕೆಯೇನೂ ಇರಲಿಲ್ಲ. ಅವರನ್ನು ಪಿ.ಸಿ.ಎಂ. ಗೆ ಸೇರಿಸಲಾಗಿತ್ತು. ಲೆಕ್ಕ ಹಿಡಿಸಲಿಲ್ಲ. ತರಗತಿಗಳಿಗೆ ಸರಿಯಾಗಿ ಹಾಜರಾಗುತ್ತಿರಲಿಲ್ಲ. ಪಾಠಕ್ಕಿಂತ ಪಾಠೇತರ ಚಟುವಟಿಕೆಗಳ ಕಡೆಯೇ ಅವರು ಹೆಚ್ಚು ಗಮನ ಕೊಡಲಾರಂಭಿಸಿದರು. ಸೋಮಣ್ಣ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿದರು. ಡಿಬೇಟಿಂಗ್ ಸೊಸೈಟಿಯ ಕಾರ್ಯದರ್ಶಿಯಾದರು. ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದು ಏಕಪಾತ್ರಾಭಿನಯ ಮಾಡುವುದು, ಅಂಗಸಾಧನೆ, ಯೋಗಾಭ್ಯಾಸ ನಡೆದಿದ್ದವು. ವಿದ್ಯಾರ್ಥಿ ಮುಖಂಡನಾಗಿ ವಿದ್ಯಾರ್ಥಿಯೊಬ್ಬನು ದೌರ್ಜನ್ಯಕ್ಕೆ ಒಳಗಾದನೆಂದು ಚಳವಳಿ ನಡೆಸಿದರು. ಸಂಘಟನಾ ಚಾತುರ್ಯದಿಂದ ಹೀರೋ ಆದರು. ಈ ನಡುವೆ ಸೋದರ ಮಾವ ಜಯರಾಂ ಅವರ ಕಣ್ಣರಿಕೆಯಲ್ಲಿ ಗಡಿಯಾರ ರಿಪೇರಿ ಇತ್ಯಾದಿ ಕೈಕೆಲಸವನ್ನು ಕಲಿತರು. ಆದರೆ ಸರಿಯಾಗಿ ಓದದೆ ಇಂಟರ್‌ನಲ್ಲಿ ಫೇಲಾದರು. ರ್‍ಯಾಂಕ್ ಮನೆತನಕ್ಕೆ ಕಪ್ಪು ಚುಕ್ಕೆ ಇಟ್ಟಂತಾಯಿತು.

ಗೆಳೆಯರು ಕೂಡಿ ನಡೆಸುತ್ತಿದ್ದ ಚರ್ಚೆಗಳು ರಸಪೂರ್ಣವಾಗಿರುತ್ತಿದ್ದವು. ಅವು ಮಾಹಿತಿಪೂರ್ಣವಾಗಿದ್ದು ಬುದ್ಧಿಗೆ ಆಹಾರ ಒದಗಿಸುತ್ತಿದ್ದವು. ಹತ್ತಾರು ಪುಸ್ತಕಗಳನ್ನು ಓದಿ ಜೀರ್ಣಿಸಿಕೊಂಡ ಅನುಭವ ರಸಾಯನವಾಗಿರುತ್ತಿತ್ತು. ಇದರಿಂದ ಅವರ ಲೋಕಜ್ಞಾನ ಹೆಚ್ಚಿತು. ಅವರೇ ಒಂದು ಕಡೆ ಹೀಗೆ ಹೇಳಿಕೊಂಡಿದ್ದಾರೆ: "ನನಗೆ ತುಂಟನೆಂಬ ಬಿರುದಿತ್ತು. ಆದರೆ ನಾನು ಪೋಲಿಯಲ್ಲ. ಮುಚ್ಚಿಟ್ಟುಕೊಳ್ಳುವ ಗುಟ್ಟು ಗೊತ್ತಿದ್ದವರು ಒಳ್ಳೆಯವರಾದರು. ಬಿಚ್ಚಿಡುವ ನನ್ನಂಥವರು ಕೆಟ್ಟವರಾದೆವು. ಲೋಕದ ರೀತಿಯೆ ಹಾಗೆ. ಇದ್ದುದನ್ನು ಇದ್ದಂತೆ ಹೇಳುವ ಸ್ವಭಾವ ನನ್ನದು."

ನಿಜ. ಸೋಮಣ್ಣ ದಾಕ್ಷಿಣ್ಯಪರನಲ್ಲ. ತನ್ನ ಸಹಜ ದಿಟ್ಟ ನಿಲುವಿನಿಂದ ಲೋಕವಿರೋಧಿಯಾಗುವ ಪರಿಸ್ಥಿತಿಯಿತ್ತು.

ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಟ್ಟು ಹಿಡಿದು ಓದಿ ಇಂಟರ್ ಪಾಸು ಮಾಡಿದರು. ಡಿಗ್ರಿ ಓದಲು ಚಿತ್ರದುರ್ಗದಲ್ಲಿ ಅವಕಾಶವಿರಲಿಲ್ಲ. ಅಣ್ಣ ಸೂರ್ಯನಾರಾಯಣರಾವ್ ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಶ್ ಅಧ್ಯಾಪಕರಾದರು. ಸೋಮಣ್ಣ ಅಲ್ಲಿಗೆ ಬಂದು ಬಿ.ಎ. ತರಗತಿ ಸೇರಿದರು. ಐಚ್ಛಿಕ ಕನ್ನಡ, ಸಮಾಜಶಾಸ್ತ್ರ ಹಾಗೂ ರಾಜ್ಯ ಶಾಸ್ತ್ರಗಳನ್ನು ಆರಿಸಿಕೊಂಡರು. ಇಲ್ಲೂ ಹಳೆಯ ಚಾಳಿಯೇ. ತರಗತಿಗಳಿಗೆ ಹೋಗುವುದೇ ಕಡಿಮೆ. ಹೋದರೂ ನೋಟ್ಸ್ ತೆಗೆದುಕೊಳ್ಳುತ್ತಿರಲಿಲ್ಲ. ಕೇಳಿದರೆ ನಾನು ಪಠ್ಯಪುಸ್ತಕಗಳನ್ನು ಓದಿ ಬರೆದುಕೊಳ್ಳುತ್ತೇನೆ ಎನ್ನುತ್ತಿದ್ದರು. ಇದನ್ನೆಲ್ಲಾ ಗಮನಿಸಿದ ಅಣ್ಣ ಗದರಿದಾಗ ಎಚ್ಚೆತ್ತು ನಿರಂತರ ಓದಿನ ಕಡೆ ಗಮನ ಕೊಟ್ಟರು. ಸೋಮಣ್ಣ ಸೋಮಾರಿಯಾದರೂ ಲೈಬ್ರರಿಯಲ್ಲಿ ಮನಸ್ಸಿಟ್ಟು ಓದುತ್ತಾ ಕುಳಿತರೆ ಓದಿದ್ದೆಲ್ಲವೂ ನೆನಪಿನಲ್ಲಿರುತ್ತಿತ್ತು. ಅಂಥ ಅದ್ಭುತವಾದ ಜ್ಞಾಪಕಶಕ್ತಿ ಇದ್ದುದರಿಂದಲೇ ಅನಾಯಾಸವಾಗಿ ಉನ್ನತ ದರ್ಜೆಯಲ್ಲಿ ಪಾಸು ಮಾಡುತ್ತಿದ್ದುದು. ಮೊದಲ ಹತ್ತು ರ್‍ಯಾಂಕ್‌ಗಳಲ್ಲಿ ಒಬ್ಬನಾಗಿ ಸೋಮಣ್ಣ ಬಿ. ಎ. ಓದಲಿ ಎಂಬುದು ಎಲ್ಲರ ಅಪೇಕ್ಷೆಯಾಯಿತು. ಸಮಾಜಶಾಸ್ತ್ರದ ಸ್ನಾತಕೋತ್ತರ ಪದವಿ ಪಡೆಯಲು ಸೋಮಣ್ಣ ಮೈಸೂರಿನಲ್ಲಿ ಎರಡನೇ ಆನರ್ಸ್ ಸೇರಬೇಕಿತ್ತು. ಮೂರನೇ ಆನರ್ಸ್ ಮುಗಿಸಿ ಒಂದು ವರ್ಷದ ಎಂ.ಎ. ಮಾಡಬೇಕಿತ್ತು. ಇದಕ್ಕೆ ಅಣ್ಣಂದಿರ ಪ್ರೋತ್ಸಾಹವಿತ್ತು.

ಅಂತು ಸೋಮಣ್ಣ ಮೈಸೂರು ಮಹಾರಾಜಾ ಕಾಲೇಜಿನ ಆನರ್ಸ್ ವಿದ್ಯಾರ್ಥಿಯಾದರು. ಅವರಿಗೆ ಇದೊಂದು ಹೆಮ್ಮೆಯ ವಿಷಯವಾಗಿತ್ತು. ಮೈಸೂರಿನ, ಅದರಲ್ಲೂ ಮಹಾರಾಜಾ ಕಾಲೇಜಿನ ವಾತಾವರಣ, ಅಲ್ಲಿದ್ದ ಪ್ರಕಾಂಡ ಪಂಡಿತರಾದ ಗುರುವರ್ಗ, ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳನ್ನು ನೋಡಿದರೆ ಸೋಮಣ್ಣನಿಗೆ ಹಳ್ಳಿಯಿಂದ ದಿಲ್ಲಿಗೆ ಬಂದಂತಾಯಿತು. ಎಂ.ಎ. ಪಾಸು ಮಾಡಬೇಕು. ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆಯಬೇಕು. ಪ್ರಾಧ್ಯಾಪಕರಾಗಿ ಮಿಂಚಬೇಕು. ಹೆಚ್ಚಿನ ಅಧ್ಯಯನಕ್ಕೆ ವಿದೇಶದ ವಿಶ್ವವಿದ್ಯಾಲಯಗಳಿಗೆ ಹೋಗಬೇಕು. ಇಂಥ ಹತ್ತಾರು ಕನಸುಗಳು ಅವರಿಗಿದ್ದವು. ಅಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಕುದುರಿಸುವ, ಅವರ ಬೌದ್ಧಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುವ ನಿರ್ಮತ್ಸರರೂ, ಗುಣಗ್ರಾಹಿಗಳೂ ಆದ ಗುರುಗಳಿದ್ದರು. ಜೊತೆಗೆ ಶಿಸ್ತಿನ, ಶ್ರದ್ಧಾವಂತ ವಿದ್ಯಾರ್ಥಿಗಳೂ ಆಗ ಇದ್ದರು.

ಇಷ್ಟಾದರೂ ಸೋಮಣ್ಣನ ವಿದ್ಯಾರ್ಥಿ ಜೀವನ ಸುಖಮಯವಾಗಿರಲಿಲ್ಲ. ವಸತಿ ಮತ್ತು ಊಟಕ್ಕೆ ಪರದಾಡಬೇಕಾಯಿತು. ವಿದ್ಯಾರ್ಥಿನಿಲಯವೊಂದರಲ್ಲಿ ಪ್ರಯಾಸದಿಂದ ಜಾಗ ದೊರಕಿಸಿಕೊಂಡರು. ಆದರೆ ಅಲ್ಲಿನ ಕೃತಕವಾದ ಕಟ್ಟುಪಾಡುಗಳು, ಸ್ವತಂತ್ರ ಪ್ರವೃತ್ತಿಯ ಸೋಮಣ್ಣ ಅಲ್ಲಿ ಇರಲಾಗಲಿಲ್ಲ. ಕಷ್ಟವಾದರೂ ನಿರಾಳವಾಗಿ ಉಸಿರಾಡಬಹುದಾದ ಸ್ಥಳ ಅವರಿಗೆ ಬೇಕಾಗಿತ್ತು. ಮೂರು ವರ್ಷ ಅವರು ಅಲ್ಲಿ ಪಟ್ಟ ಪಾಡು ಯಾರಿಗೂ ಬೇಡ! ಕಾಲೇಜು ಫೀ ಕಟ್ಟಲು, ಒಂದು ಹೊತ್ತಿನ ಊಟಕ್ಕೆ ಅವರು ಬಿದ್ದ ಭಂಗ, ಪಟ್ಟ ಅವಮಾನ ಎಷ್ಟು! ಇಂಥ ಪ್ರಸಂಗಗಳಲ್ಲಿ ಅವರಿಗೆ ನೆರವಾದವರು ಅವರ ಆತ್ಮೀಯರು, ನೆಚ್ಚಿನ ನೇಹಿಗರು. ಎಂಥ ಕಷ್ಟ ಬಂದಾಗಲೂ, ದಾರಿದ್ರ್ಯ ಕಾಡಿದಾಗಲೂ ಸೋಮಣ್ಣ ದಿಙ್ಮೂಢರಾಗಿ ಮೂಲೆ ಹಿಡಿಯಲಿಲ್ಲ. ಸ್ವಾಭಿಮಾನವನ್ನು ಮುಂದೊಡ್ಡಿ ಮುಸುಂಡಿಯಾಗಲಿಲ್ಲ. ಅಸದೃಶ ಧೈರ್ಯ ತೋರಿದರು. ಅವರಿಗಿದ್ದ ಜೀವನೋತ್ಸಾಹ ಅನನ್ಯವಾದದ್ದು. ಗೋಳನ್ನು ಗಾನವಾಗಿಸಿಕೊಂಡು ಸ್ವಚ್ಛಂದವಾಗಿ ಹಾರಾಡುತ್ತಾ ಹಾಡುವ ವಿಶಿಷ್ಟ ವ್ಯಕ್ತಿತ್ವ ಅವರದಾಗಿತ್ತು.

ಮೈಸೂರಿನಲ್ಲಿ ಓದುತ್ತಿದ್ದಾಗ ಅನೇಕ ಹೆಸರಾಂತ ಪ್ರಾಧ್ಯಾಪಕರು, ತತ್ತ್ವಜ್ಞಾನಿಗಳು, ಅಭಿನಯ ಚತುರರು, ರಂಗಕರ್ಮಿಗಳು ಅವರಿಗೆ ಪರಿಚಯವಾದರು, ಆತ್ಮೀಯರಾದರು. ಅವರ ಬಾಳಿನ ಸೌಭಾಗ್ಯದ ಬಾಗಿಲು ತೆರೆದಂತಾಯಿತು. ಪ್ರೊ. ನಿಕ್ಕಂ, ರಾಘವಾಚಾರ್, ಸಿ. ಡಿ. ನರಸಿಂಹಯ್ಯ, ಸಂಪತ್, ಮೈಸೂರು ಅನಂತಸ್ವಾಮಿ, ಟಿ. ಆರ್. ಮಹಾಲಿಂಗಂ ಮೊದಲಾದ ಕಲಾವಿದರ ಸಂಪರ್ಕ ಇವರ ವ್ಯಕ್ತಿತ್ವವನ್ನು ರೂಪಿಸಿತು. ವರ್ಷಗಳುರುಳಿದ್ದೇ ಗೊತ್ತಾಗಲಿಲ್ಲ. ಎರಡನೇ ವರ್ಷದ ಆನರ್ಸ್ ಮುಗಿದು ಸ್ನಾತಕೋತ್ತರ ತರಗತಿಯೂ ಅಂತಿಮ ಘಟ್ಟದಲ್ಲಿತ್ತು.

ಅವರಿದ್ದ ರೂಮಿನಲ್ಲಿ ಕಳ್ಳತನವಾಗಿ ಇದ್ದಬಿದ್ದದ್ದನ್ನೆಲ್ಲಾ ಕಳ್ಳರು ಒಯ್ದರು. ದುರ್ಭಿಕ್ಷದಲ್ಲಿ ಅಧಿಕ ಮಾಸ ಎಂಬಂತಾಯ್ತು. ಮೊದಲಿಗೆ ಹಾಕಿಕೊಳ್ಳಲು ಒಂದು ಜೊತೆ ಬಟ್ಟೆ, ಹಾಸಲು ಹೊದೆಯಲು ವಸ್ತ್ರ ಹೊಂದಿಸಿಕೊಳ್ಳಬೇಕಾಯಿತು. ಗೆಳೆಯರು ನೆರವಾದರು. ಪರೀಕ್ಷೆ ಹತ್ತಿರ ಬರುತ್ತಿತ್ತು. ಲೈಬ್ರರಿಯಲ್ಲಿ ಪಟ್ಟಾಗಿ ಕೂತು ಹಗಲೂ ರಾತ್ರಿ ಓದಿದರು. ಯುದ್ಧಕಾಲೇ ಶಸ್ತ್ರಾಭ್ಯಾಸ. ಓದಿದಷ್ಟೂ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿದು ಪರೀಕ್ಷೆಯಲ್ಲಿ ಚೆನ್ನಾಗಿಯೇ ಬರೆದರು. ಲಿಖಿತ ಪರೀಕ್ಷೆ ಮುಗಿದಿತ್ತು. ಮೌಖಿಕ ಪರೀಕ್ಷೆ ಉಳಿದಿತ್ತು. ಸ್ನೇಹಿತರೆಲ್ಲಾ ಊರುಗಳಿಗೆ ಹೋದರು. ಕೆಲಸ ಸಿಕ್ಕುವುದು ಕಷ್ಟ. ಇದಕ್ಕಾಗಿ ಅವರು ಪಟ್ಟ ಶ್ರಮ ನಿರುದ್ಯೋಗ ಸಮಸ್ಯೆಯ ರೂಕ್ಷ ಚಿತ್ರವನ್ನು ನಮ್ಮೆದುರು ನಿಲ್ಲಿಸುತ್ತದೆ.

ಮೈಸೂರಿನ ಬಲ್ಲಾಳ್ ಹೋಟೆಲಿನ ಲಕ್ಷ್ಮೀನಾರಾಯಣ ಅವರು ಇವರ ಪರಮ ಸ್ನೇಹಿತರು. ಅವರು ಬರಿಯ ಹೋಟೆಲ್ ಮಾಲೀಕರಷ್ಟೇ ಆಗಿರದೆ ಸಂಗೀತ, ಸಾಹಿತ್ಯಗಳಲ್ಲಿ ಅಭಿರುಚಿಯುಳ್ಳವರಾಗಿದ್ದುದು ಇವರ ಸುದೈವ. ಅವರಿಂದ ಸೋಮಣ್ಣನಿಗೆ ದೊರೆತ ನೆರವು ಅಪಾರ. ಸಾಲದ ಪಟ್ಟಿ ಜಾಸ್ತಿಯಾದಂತೆ ಗಳಿಕೆ ಮಾರ್ಗವನ್ನು ಕಂಡುಕೊಳ್ಳಲು ಹಪಹಪಿಸುತ್ತಿದ್ದರು. ಆಗ ಚುನಾವಣೆ ಬಂತು. ಒಬ್ಬ ಚುನಾವಣಾ ಅಭ್ಯರ್ಥಿಯ ಪ್ರಚಾರಕ್ಕೆ ತೊಡಗಿದರು. ಕರಪತ್ರ ಹಂಚಿದರು, ಚುನಾವಣಾ ಭಾಷಣ ಮಾಡಿದರು. ಮನೆ ಮನೆ ಸುತ್ತಿ ಓಟು ಕೇಳಿದರು. ಸ್ವಲ್ಪ ದಿನ ಹೊಟ್ಟೆ ಚಿಂತೆಯಿಲ್ಲದೆ ಹೀಗೆ ಕಳೆಯಿತು.

ಎಂ. ಎ. ಮೌಖಿಕ ಪರೀಕ್ಷೆ ನಡೆಯಿತು. ಪ್ರಾಧ್ಯಾಪಕರು ಸೋಮಣ್ಣನ ಕೈ ಕುಲಕಿ ಅವರು ರ್‍ಯಾಂಕ್‌ನಲ್ಲಿ ಪಾಸಾಗಿರುವದಾಗಿ ಹೇಳಿದರು. ಸೋಮಣ್ಣನಿಗೆ ಆಶ್ಚರ್ಯ, ಜೊತೆಗೆ ಕೃತಕೃತ್ಯತೆ. ನೂರೆಂಟು ತಾಪಗಳ ನಡುವೆಯೂ ವಿದ್ಯಾರ್ಥಿ ಜೀವನವು ಸಾರ್ಥಕವಾಗಿತ್ತು. ಓದಿದ್ದು ಸಾಕು. ಇನ್ನು ಬದುಕು ರೂಪಿಸಿಕೊಳ್ಳುವತ್ತ ಗಮನ ಕೊಡಬೇಕು ಎಂದುಕೊಂಡರು. ಮಹಾವಿದ್ಯಾಲಯದ ಮಹಾದ್ವಾರವನ್ನು ದಾಟಿ ಜಗದ ಬದುಕಿನ ಬಾಗಿಲನ್ನು ಪ್ರವೇಶಿಸಿದ ಅನುಭವ ಸೋಮಣ್ಣನಿಗಾಯಿತು.

## ವೃತ್ತಿ ಜೀವನ

ಸ್ನಾತಕೋತ್ತರ ಪದವಿಯನ್ನು ಉನ್ನತ ದರ್ಜೆಯಲ್ಲಿ ಪಾಸು ಮಾಡಿದವನಿಗೆ ಕರೆದು ಕೆಲಸ ಕೊಡುತ್ತಾರೆಂಬ ಭಾವನೆಯಿದೆ. ಆದರೆ ಸೋಮಣ್ಣನ ವಿಚಾರದಲ್ಲಿ ಆದದ್ದೇನು ? ಸ್ವತಃ ಗುರುಗಳು, ರ್‍ಯಾಂಕ್ ಗಳಿಸಿದನೆಂದು ಹೆಮ್ಮೆಪಟ್ಟವರು ರಾಜಕಾರಣಿಗಳ ಒತ್ತಡಕ್ಕೆ ಮಣಿದು ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರ ವಿಭಾಗದಲ್ಲಿ ಖಾಲಿಯಿದ್ದ ಅಧ್ಯಾಪಕ ಸ್ಥಾನಕ್ಕೆ ಎರಡನೇ ದರ್ಜೆಯಲ್ಲಿ ಪಾಸಾದವನನ್ನು ನೇಮಿಸಿಕೊಂಡರು. ಆಗ ಸೋಮಣ್ಣನಿಗೆ ಏನಾಗಿರಬೇಡ ? ನೇರವಾಗಿ ಇಲಾಖೆಯ ಪ್ರಾಧ್ಯಾಪಕರೊಡನೆ ವಾದಕ್ಕಿಳಿದರು. ಏನೂ ಮಾಡಲಾಗಲಿಲ್ಲ. ರೋಷಕ್ಕೆ ಬದಲಾಗಿ ದುಃಖ ಉಮ್ಮಳಿಸಿತು. ತಮಗಾದ ನಿರಾಶೆಯಿಂದ ಧೃತಿಗೆಡದೆ ದೊಡ್ಡವರ ಸಣ್ಣತನವನ್ನು ಬಯಲಿಗೆಳೆದು ಪತ್ರಿಕೆಗೆ ಬರೆದರು. ಪರಿಣಾಮ ವಿಶ್ವವಿದ್ಯಾಲಯದ ಉದ್ಯೋಗವಕಾಶದ ಬಾಗಿಲು ಮುಚ್ಚಿಹೋಯಿತು.

ನಿರಾಶೆಯಿಂದ ಮುರುಟಿ ಹೋಗಬಹುದಾಗಿದ್ದ ಅವರ ಜೀವನವೃಕ್ಷ ಚಿಗುರತೊಡಗಿದ್ದು ಆತ್ಮೀಯ ಮಿತ್ರರ ನೆರವಿನಿಂದ ಹಾಗೂ ಸಾಂಸ್ಕೃತಿಕ ವಲಯದ

ವಾತಾವರಣದಿಂದ! ವಿವಿಧ ನಾಟಕ ತಂಡಗಳೊಡನೆ ಒಂದಾಗಿ ನಾಟಕ ಆಡಿದರು. ಮೆಲೊಡಿ ಮೇಕರ್ಸ್ ಸಂಸ್ಥೆ ಮೂಲಕ ಸಂಗೀತ ಕಾರ್ಯಕ್ರಮ ನಡೆಸಿ ಹಣ ಗಳಿಕೆ ಮಾರ್ಗ ಕಂಡುಕೊಂಡದ್ದು ಉಂಟು. ಸುಗಮ ಸಂಗೀತ ಗಾಯಕ ಮೈಸೂರು ಅನಂತಸ್ವಾಮಿ ಹಾಗೂ ಸಂಗೀತ ನಿರ್ದೇಶಕ ಗುಣಸಿಂಗ್ ಇದರಲ್ಲಿ ಸೇರಿದ್ದರು. ಉದರ ನಿಮಿತ್ತಂ ಬಹುಕೃತ ವೇಷಂ ಎಂದು ಸೋಮಣ್ಣ ಹೇಳುವ ಅನುಭವಗಳನ್ನು ಕೇಳುತ್ತಿದ್ದರೆ ನಂಬುವುದೇ ಕಷ್ಟ. ಆದರೆ ಆ ಕಾಲಕ್ಕೆ ಅದು ವಾಸ್ತವ. "ಧೈರ್ಯವೊಂದೇ ಸರ್ವತ್ರ ಸಾಧನ". "ಬಾಯಿದ್ದವ ಬರದಲ್ಲಿ ಗೆದ್ದ" ಎಂಬ ಉಕ್ತಿಗಳಿಗೆ ದೃಷ್ಟಾಂತವಾಗುವ ರೀತಿಯಲ್ಲಿ ಕೆಲ ಕಾಲ ಜೀವನ ಸಾಗಿಸಿದರು.

ಸೋಮಣ್ಣ ಹೀಗೆ ಉದ್ಯೋಗವಿಲ್ಲದೆ ಏಕಾಕಿತನ ಅನುಭವಿಸುತ್ತಿರುವ ವೇಳೆಗೆ ಮನಶ್ಶಾಸ್ತ್ರ ಪ್ರಾಧ್ಯಾಪಕ ಕುಪ್ಪುಸ್ವಾಮಿಯವರು ತಮ್ಮ ಸಂಶೋಧನಾ ಯೋಜನೆಯಡಿ ಕೆಲಸ ಮಾಡಲು ಆಹ್ವಾನಿಸಿದರು. ಅದೂ ತಾತ್ಕಾಲಿಕ. ಮತ್ತೆ ನಿರುದ್ಯೋಗ ಸ್ವಲ್ಪ ದಿವಸ! ಸರ್ಕಾರದ ಕಾರ್ಮಿಕ ಇಲಾಖೆಯಿಂದ ಭದ್ರಾವತಿ ಗಣಿ ಪ್ರದೇಶದಲ್ಲಿ ಹಂಗಾಮಿ ಕಾರ್ಮಿಕ ಕಲ್ಯಾಣಾಧಿಕಾರಿಯಾಗಿ ನೇಮಿಸಿ ಆದೇಶ ಬಂತು. ಸರಿ ಅವರು ಅಲ್ಲಿಗೆ ಹೋಗಿ ಕೆಲಸದ ಮೇಲೆ ಹಾಜರಾಗಿ ಪಡೆದ ಅನುಭವವನ್ನು ಮೈದುಂಬಿ ಹೇಳುತ್ತಾರೆ. ಈ ಅಧಿಕಾರಿಗಾಗಿಯೇ ಒಂದು ರೈಲು, ವಾಸಕ್ಕೆ ಭವ್ಯ ಕೊಠಡಿ.. ವೈಭವದ ಊಟ, ಆಳುಕಾಳು, ಗೌರವ. ಸ್ವರ್ಗದ ಕಲ್ಪನೆಯನ್ನು ವಾಸ್ತವವಾಗಿಸುವ ಸನ್ನಿವೇಶದಲ್ಲಿ ಅವರಿದ್ದರು. ಅವರಿದ್ದ ಹಂಗಾಮಿ ಹುದ್ದೆಗೆ ಮಂತ್ರಿಗಳ ಶಿಫಾರಸಿನ ಅಭ್ಯರ್ಥಿ ಬಂದಾಗ ಸೋಮಣ್ಣ ಜಾಗ ಖಾಲಿ ಮಾಡಬೇಕಾಯಿತು. ಮತ್ತೆ ಬೀದಿಗೆ ಬಿದ್ದರು!

## ಸಂಸಾರ

ಬೇಸತ್ತ ಸೋಮಣ್ಣ ಚಿತ್ರದುರ್ಗಕ್ಕೆ ಹಿಂತಿರುಗಿದರು. ಸ್ವಲ್ಪ ದಿನಗಳಲ್ಲೇ ಧಾರವಾಡ ಜಿಲ್ಲಾ ನರಗುಂದದ ಹತ್ತಿ ಗಿರಣಿಯಲ್ಲಿ ಕೆಲಸ ಸಿಕ್ಕಿತು. ಅಲ್ಲಿನ ಭಾಷಾವೈಶಿಷ್ಟ್ಯವನ್ನು ಅನುಭವಿಸುತ್ತಾ ಅಪೂರ್ವ ಲೋಕಾನುಭವವನ್ನು ಪಡೆಯುತ್ತಾ ಮೂರು ವರ್ಷ ಕೆಲಸ ಮಾಡಿದರು. ಆ ಭಾಗದಲ್ಲಿ ಪ್ರಸಿದ್ಧವಾಗಿದ್ದ ವೃತ್ತಿ ನಾಟಕಗಳನ್ನು ತಪ್ಪದೇ ನೋಡುತ್ತಿದ್ದರು. ಅಷ್ಟು ಹೊತ್ತಿಗೆ ಸೋಮಣ್ಣನಿಗೆ ಮದುವೆ ಮಾಡುವ ಪ್ರಸ್ತಾಪ ಬಂತು. ಕೋಲಾರದ ಚಿನ್ನದ ಗಣಿಯಲ್ಲಿ ಉನ್ನತ ಅಧಿಕಾರಿಯಾಗಿದ್ದ ನಾರಾಯಣರಾಯರ ಮಗಳು ಲಲಿತಮ್ಮ ಪದವೀಧರೆ. ಆಕೆಯೇ

ವಧು. ವಧು ಪರೀಕ್ಷೆ ನಡೆದಾಗ ಸೋಮಣ್ಣ ವಧುವಿನೊಡನೆ ಪ್ರತ್ಯೇಕವಾಗಿ ಮಾತನಾಡ ಬಯಸಿದರು. ಅವರು ತನ್ನ ಇತಿಮಿತಿಗಳನ್ನು, ದೋಷ ದೌರ್ಬಲ್ಯಗಳನ್ನು ಮನ ಬಿಚ್ಚಿ ಹೇಳಿ, ತನಗೆ ಬರುವ ಸಂಬಳ ಸಾರಿಗೆ ವಿಷಯವನ್ನು ತಪ್ಪದೆ ವಿವರಿಸಿ, "ಮದುವೆಗೆ ಒಪ್ಪಿಗೆಯಾ ?" ಎಂದು ಕೇಳಿದರು. ಆಕೆ ಒಪ್ಪಿಗೆ ಸಿಕ್ಕ ಮೇಲೆ ತನಗೆ ಹೆಣ್ಣು ಒಪ್ಪಿಗೆ ಎಂದರು ಸೋಮಣ್ಣ. ೧೯೬೩ ರಲ್ಲಿ ಮದುವೆಯಾಯಿತು. ಸೋಮಣ್ಣನಂಥ ಉಂಡಾಡಿ ಗುಂಡನನ್ನು ಕಟ್ಟಿಕೊಂಡು ಆ ಹೆಣ್ಣು, ಸಂಸಾರದ ಕಣ್ಣಾಗಿ ಜಾಣತನದಿಂದ ಸಂಸಾರ ನಿರ್ವಹಿಸಿದರು. ಲಲಿತಮ್ಮನು ಸೋಮಣ್ಣನ ಬದುಕು ಹಸನುಗೊಳಿಸಿ ಹುಟ್ಟಿದ ಮನೆ ಮತ್ತು ಕೊಟ್ಟ ಮನೆಗಳೆರಡಕ್ಕೂ ಕೀರ್ತಿ ತಂದು ಮಹಾಸಾಧ್ವಿ ಎನಿಸಿಕೊಂಡರು. ಮುತ್ತಿನಂಥ ಎರಡು ಗಂಡು ಮಕ್ಕಳನ್ನು ಹೆತ್ತು, ಅವರನ್ನು ಒಳ್ಳೆಯ ವಿದ್ಯಾವಂತರನ್ನಾಗಿ ಮಾಡಿದರು. ಪ್ರಸನ್ನ ಇಂಜಿನಿಯರ್ ಆಗಿ ಅಮೇರಿಕದಲ್ಲಿ ಅಧ್ಯಯನ ಮುಗಿಸಿ ಬಂದು ಬೆಂಗಳೂರಲ್ಲೇ ಇದ್ದರೆ, ಎರಡನೇ ಮಗ ವಿವೇಕಾನಂದ ನ್ಯಾಯವಾದಿಯಾಗಿ ಯಶಸ್ಸಿನ ಹಾದಿಯಲ್ಲಿ ಸಾಗಿದ್ದಾನೆ.

ಸೋಮಣ್ಣನಿಗೆ ಕೆನರಾ ಬ್ಯಾಂಕಿನಲ್ಲಿ ಬ್ಯಾಂಕಿನ ಸಿಬ್ಬಂದಿ ಸಂಬಂಧಗಳನ್ನು ನೋಡಿಕೊಳ್ಳುವ ಹುದ್ದೆ ದೊರೆತು ಬೆಂಗಳೂರಿನಲ್ಲಿ ಖಾಯಂ ಆಗಿ ನೆಲೆಸಿದರು. ಬ್ಯಾಂಕ್ ಪರೀಕ್ಷೆಗಳನ್ನು ನಡೆಸುವುದು, ಸಂದರ್ಶನಗಳನ್ನು ಏರ್ಪಡಿಸುವುದು ಮೊದಲಾದ ಜವಾಬ್ದಾರಿಗಳನ್ನು ನಿರ್ವಹಿಸಿದರು. ಮುಂದೆ ಅವರಿಗೆ ಬಡ್ತಿ ದೊರೆತು ಮೈಸೂರಿನ ಬ್ಯಾಂಕಿಗೆ ಶಾಖಾಧಿಕಾರಿಯಾಗಿ ಹೋದರು. ಬ್ಯಾಂಕಿನ ವ್ಯವಸ್ಥಾಪನೆಯ ಜೊತೆಗೆ ರಂಗ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಅಲ್ಲದೆ ಸೋಮಣ್ಣ "ಸ್ಟಾರ್ ಆಫ್ ಮೈಸೂರು", "ಮೈಸೂರು ಮಿತ್ರ" ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ಲಯನ್ಸ್ ಕ್ಲಬ್ಬಿನ ಸಂಪರ್ಕವಿಟ್ಟುಕೊಂಡು ಅವರ ಕಾರ್ಯದರ್ಶಿಯಾಗಿದ್ದರು. ಆಹ್ವಾನದ ಮೇರೆಗೆ ಶಾಲಾ ಕಾಲೇಜುಗಳಿಗೆ ಹಾಗೂ ಸಂಘ, ಸಂಸ್ಥೆಗಳಿಗೆ ಹೋಗಿ ಉಪನ್ಯಾಸ ನೀಡುತ್ತಿದ್ದರು. ಹೀಗಾಗಿ ಸದಾ ಕ್ರಿಯಾಶೀಲ ಬದುಕನ್ನು ನಡೆಸಿದರು.

ಮತ್ತೆ ಬೆಂಗಳೂರಿಗೆ ಹಿಂತಿರುಗಿ ಕೆನರಾ ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿನ ಪ್ರಾಂಶುಪಾಲರಾದರು. ಅಲ್ಲಿನ ಸಾಧನೆಯೇನೂ ಕಡಿಮೆಯದಾಗಿರಲಿಲ್ಲ. ವೃತ್ತಿ ಪರಿಣತಿಗಾಗಿ ವಿವಿಧ ಪ್ರಯೋಗಗಳನ್ನು ಮಾಡಿದರು. ಸಿಬ್ಬಂದಿ ಶಿಕ್ಷಣಕ್ಕೆ ದೃಶ್ಯಮಾಧ್ಯಮವನ್ನು ಬಳಸುವ ಹೊಳಹು ದೊರಕಿಸಲು ಕಥಾರೂಪಕಗಳನ್ನು ನಿರ್ಮಿಸಿದರು. ನಾಟಕ ಹಾಗೂ ಚಲನಚಿತ್ರದ ಹೆಸರಾಂತ ನಿರ್ದೇಶಕರು ಉದಾ. ಟಿ. ಎಸ್. ನಾಗಾಭರಣ, ರವಿ, ಎನ್. ಲಕ್ಷ್ಮಿನಾರಾಯಣ, ಬಿ. ಆರ್. ಕೆ. ಪ್ರಸಾದ್ ಮೊದಲಾದವರು ಅವನ್ನು ನಿರ್ದೇಶಿಸಿದ್ದರು. ಬ್ಯಾಂಕ್ ಉದ್ಯಮದಲ್ಲಿ ಇಂಥ ಹೊಸ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಸೋಮಣ್ಣನಿಗೆ ರಿಸರ್ವ್ ಬ್ಯಾಂಕ್

ಗೌರ್ನರ್ ರಾಷ್ಟ್ರಮಟ್ಟದ 'ಎ' ಗ್ರೇಡ್ ಪ್ರಶಸ್ತಿ ನೀಡಿ ಗೌರವಿಸಿದರು. ೧೯೯೪ ರಲ್ಲಿ ಸೋಮಣ್ಣ ೩೨ ವರ್ಷಗಳ ಸೇವೆಯ ನಂತರ ನಿವೃತ್ತರಾದರು. ವೃತ್ತಿಯಲ್ಲಿದ್ದಾಗಲೂ ಸಹ ಬಿಡುವು ಸಿಕ್ಕಾಗಲೆಲ್ಲಾ ತಮ್ಮ ಪ್ರವೃತ್ತಿಗೆ, ಅಂದರೆ ನಾಟಕ ರಂಗದ ಸೇವೆಗೆ ಅವಕಾಶ ಮಾಡಿಕೊಳ್ಳುತ್ತಾ ಬಂದರು. ಸೋಮಣ್ಣ ಉತ್ತಮ ಬರಹಗಾರ. ಓದುಗರ ಮನ ಸೆರೆಹಿಡಿವ ನವಿರಾದ ಹಾಸ್ಯದೊಡನೆ ಸ್ವಾರಸ್ಯವಾಗಿ ಬರೆಯಬಲ್ಲರು. ಈ ಮಾತಿನ ಮಲ್ಲ ಮಾತಿಗಿಳಿದರೆ ಹೊತ್ತು ಹೋದುದೇ ಗೊತ್ತಾಗುವುದಿಲ್ಲ.

ಸೋಮಣ್ಣ ನೀಗ ಸುಖಿ. ಚಿಕ್ಕ ಚೊಕ್ಕ ಸಂಸಾರ, ತಾನು ಆನಂದಿಸಿ, ಸಹೃದಯಿಗಳನ್ನು ಸಂತೋಷಸಾಗರದಲ್ಲಿ ತೇಲಿಸುವ ಅದ್ಭುತ ಕಲೆಯ ಉಪಾಸನೆ. ಅದು ಹವ್ಯಾಸಿ ನಾಟಕವಿರಬಹುದು; ಚಲನಚಿತ್ರವಿರಬಹುದು. ದೂರದರ್ಶನದ ಧಾರವಾಹಿ ಇರಬಹುದು. ಎಲ್ಲ ಕಡೆ ಸಲ್ಲುವ ವ್ಯಕ್ತಿತ್ವ ಅವರದು.

ಇದಿಷ್ಟೂ ಅವರ ಬಾಲ್ಯ, ಸಾಂಸಾರಿಕ ಹಾಗೂ ವೃತ್ತಿ ಜೀವನದ ನಡೆಯಾಯಿತು. ಮುಂದಿನದು ಅವರ ಪ್ರವೃತ್ತಿಯ ರಸಮಯ ಜೀವನ.

# ಪ್ರವೃತ್ತಿ ಜೀವನ

## ನಾಟಕರಂಗ

ಸೋಮಣ್ಣನ ನಟನಾ ಸಾಮರ್ಥ್ಯ ಅನುವಂಶೀಯವೇ. ಜೊತೆಗೆ ಮಾತುಗಾರಿಕೆ, ನಟನೆ, ಸಾಂಸ್ಕೃತಿಕ ಅಭಿಲಾಷೆಗಳ ಸಂಸರ್ಗದಿಂದ ಬರುವಂಥವು. ಇವರ ಮನೆಯಲ್ಲಿ ಸದಾ ಕಿವಿಗೆ ಸಂಗೀತ, ಕಣ್ಣಿಗೆ ನಾಟಕ, ಹೃದಯಕ್ಕೆ ಸಾಹಿತ್ಯ ಒದಗುತ್ತಿದ್ದವು. ಸೋಮಣ್ಣನ ತಾತ ಸಂಗೀತ ಸಾಹಿತ್ಯಾಭಿಮಾನಿ. ಮನೆಗೆ ಹರಿಕಥೆ ದಾಸರನ್ನು, ಕೀರ್ತನಕಾರರನ್ನು ಕರೆಸುತ್ತಿದ್ದರು. ನಾಟಕದ ಪ್ರಸಿದ್ಧ ನಟರು ಮನೆಯಲ್ಲಿ ತಂಗುತ್ತಿದ್ದರು. ಸಹಜವಾಗಿಯೇ ಅವರು ಹಾಡುತ್ತಿದ್ದರು. ನಾಟಕದ ಸಂಭಾಷಣೆಗಳನ್ನು ಹೇಳುತ್ತಿದ್ದರು.

ತಂದೆ ಗುಂಡಣ್ಣನವರದಂತೆ ಕಲೆಗೆ ಮಾರುಹೋದ ಚೇತನ. ಉತ್ತರ ಕರ್ನಾಟಕದವರಾಗಿದ್ದ ಅವರು ಮರಾಠಿಯ ಪ್ರಭಾವಕ್ಕೊಳಗಾಗಿದ್ದರು. ಬಾಲಗಂಧರ್ವರ ನಾಟಕಗಳಿಂದ ಹಾಡುಗಳಲ್ಲಿ ಆಸಕ್ತರು. ಸ್ನೇಹಿತರ ಮುಂದೆ ಅವರು ಹಾಡುತ್ತಿದ್ದುದುಂಟು. ನಾಟಕಗಳಲ್ಲಿ ಅಭಿರುಚಿಯಿದ್ದ ಅವರು ತಮ್ಮೊಡನೆ ಮಕ್ಕಳನ್ನೂ ಕರೆದೊಯ್ಯುತ್ತಿದ್ದರು. ಬಳ್ಳಾರಿ ರಾಘವರಂಥ ಶ್ರೇಷ್ಠ ಕಲಾವಿದರು ಇವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದರು. ಅವರ ಹಾಡು, ಮಾತು ಕೇಳುವ ಭಾಗ್ಯ ಮನೆಯವರಿಗೆಲ್ಲಾ ದೊರಕುತ್ತಿತ್ತು.

ತಾಯಿ ನಮ್ಮ ಸಂಸ್ಕೃತಿಯ ಸಾಕಾರ ಮೂರ್ತಿಯಂತಿದ್ದರು. ಸಂಪ್ರದಾಯ ನಿಷ್ಠರಾದ ಅವರು ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದರು. ಅವರ ಕಲಾಭಿರುಚಿ, ಸೌಂದರ್ಯ ಪ್ರಜ್ಞೆಗಳು ಅವರು ಬಿಡಿಸುತ್ತಿದ್ದ ರಂಗೋಲೆಗಳಲ್ಲಿ, ಗೊಂಬೆಗಳ ಅಲಂಕಾರದಲ್ಲಿ ವ್ಯಕ್ತವಾಗುತ್ತಿತ್ತು. ಅವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು ಅವರ ಸಂಗೀತ ಜ್ಞಾನಕ್ಕೆ ಸಾಕ್ಷಿಯಾಗಿದ್ದವು. ಇವೆಲ್ಲವೂ ಮನೆಯಲ್ಲಿ ಬೆಳೆಯುವ ಮಕ್ಕಳಲ್ಲಿ ಒಂದು ಸಾಂಸ್ಕೃತಿಕ ಶಿಸ್ತನ್ನು ಮೂಡಿಸುತ್ತಿದ್ದವು.

ಸೋದರ ಮಾವ ಜಯರಾಂ ಅಂಗಹೀನನಾದರೂ ಶ್ರಮಜೀವಿಯಾಗಿದ್ದುದು, ಕುಶಲ ಕೈಗಾರಿಕೆಯಲ್ಲಿ ನೈಪುಣ್ಯ ಸಾಧಿಸಿದ್ದು ಆಶ್ಚರ್ಯ ತರುವಂತಿತ್ತು. ಆತ ಚಿತ್ರ ಬಿಡಿಸುವುದರಲ್ಲಿ ನಿಪುಣನಾಗಿದ್ದುದಲ್ಲದೆ ಮರಕ್ಕೆ ಪಾಲಿಷ್ ಹಾಕುವುದರಲ್ಲಿ ನಿಸ್ಸೀಮ. ಅಲ್ಲದೆ ಪಿಟೀಲು ನುಡಿಸುವುದರಲ್ಲಿ ಜಾಣನಾಗಿದ್ದರು. ಹೀಗೆ ಅವರ ಕ್ರಿಯಾಶೀಲ ಬದುಕು ಎಳೆಯರ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಸೌಂದರ್ಯ ಪ್ರಜ್ಞೆ, ಮಾತನಾಡುವ ಕಲೆ, ಏನು ಕಷ್ಟ ಬಂದರೂ ಎದುರಿಸುವ ಧೈರ್ಯ, ಏನು ಕೆಲಸ ಕೊಟ್ಟರೂ ಮಾಡಬಲ್ಲೆನೆಂಬ ಕೆಚ್ಚು, ಸಂಗೀತ ಸಾಹಿತ್ಯಗಳಲ್ಲಿ ಅಭಿಲಾಷೆ ಮೊದಲಾದ ಗುಣಗಳು ಮಕ್ಕಳಿಗೆ ಎಳೆಯ ವಯಸ್ಸಿನಿಂದಲೇ ಮೈಗೂಡಿದವು. ಇದರಿಂದಾಗಿಯೇ ಅಣ್ಣ ವೆಂಕಟೇಶ್ ಒಳ್ಳೆಯ ಕಲಾವಿದನಾಗಿದ್ದ. ಹಾಡುಗಾರನಾಗಿ ಮೆರೆದ. ಇನ್ನೊಬ್ಬ ಅಣ್ಣ ದತ್ತಾತ್ರೇಯ. ನಾಟಕ, ಸಿನಿಮಾ ಹಾಗೂ ದೂರದರ್ಶನಗಳಲ್ಲಿ ಹೆಸರು ಮಾಡಿರುವ ನಟ. ಅದರಂತೆ ಸಹೋದರಿಯರಿಬ್ಬರೂ ಒಳ್ಳೆಯ ಕಲಾವಿದೆಯರಾಗಿ ಖ್ಯಾತರಾಗಿದ್ದಾರೆ. ಸೋಮಣ್ಣ ಇವರೆಲ್ಲರನ್ನೂ ಮೀರಿಸುವಂಥ ಶ್ರೇಷ್ಠ ನಟರಾಗಿ ಬೆಳೆದರು. ರಕ್ತದೊಡನೆ ಬಂದು, ಪರಿಸರದ ಪ್ರಭಾವದಿಂದ ಸತ್ವ ಹೊಂದಿ ಸ್ವಸಾಮರ್ಥ್ಯದಿಂದ ಶ್ರೀಮಂತಗೊಂಡ ಸೋಮಣ್ಣನ ಅಭಿನಯ ಕಲೆ ಸತ್ಫಲವನ್ನು ನೀಡಿತು.

೧೯೪೩ ರಲ್ಲಿ ಚಿತ್ರದುರ್ಗದಲ್ಲಿ ಇತಿಹಾಸದ ಮೇಷ್ಟ್ರು ರಾಜಗೋಪಾಲ ಅಯ್ಯಂಗಾರ್ ಅವರು ಕೈಲಾಸಂ ನಾಟಕವನ್ನು ಕಲಿಸುತ್ತಿದ್ದರು. ಅದರಲ್ಲಿನ ಮೊದ್ದುಮಣಿ ಪಾತ್ರಕ್ಕೆ ಬಾಲನಟ ಸೋಮಣ್ಣನನ್ನು ಸೇರಿಸಿಕೊಂಡಿದ್ದರು. ಇದು ವಾಸ್ತವವಾಗಿ ಸೋಮಣ್ಣನ ರಂಗಪ್ರವೇಶ– ಅರಂಗೇಟ್ರಂ.

ಮುಂದೆ ಎಸ್. ಎಸ್. ಎಲ್. ಸಿ. ಪಾಸಾದರೂ ಸಹ ಕಾಲೇಜು ಸೇರಲಾಗದೆ ಉಳಿದಾಗ ಅವರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಳ್ಳೆಯ ಅವಕಾಶ ದೊರೆತಂತಾಯಿತು. ಅವರು ಇಂಟರ್ ಮೀಡಿಯೆಟ್ ಓದುವಾಗ ವಿದ್ಯಾರ್ಥಿ ಸಂಘದ ಮೂಲಕ ಅಡಿದ

'ಮರ್ಚೆಂಟ್ ಆಫ್ ವೆನಿಸ್' ನಾಟಕದ ಇವರ ಶೈಲಾಕ್ ಪಾತ್ರ ಎಲ್ಲರ ಗಮನ ಸೆಳೆಯಿತು. ಸಮಾರಂಭಕ್ಕೆ ಅತಿಥಿಯಾಗಿ ಆಗಮಿಸಿದ್ದ ಶಿವರಾಮ ಕಾರಂತರು ಮೆಚ್ಚಿಗೆ ಸೂಚಿಸಿದ್ದು ಸೋಮಣ್ಣನಲ್ಲಿ ಆತ್ಮವಿಶ್ವಾಸ ಮೂಡಿಸಿತು.

ಇಂಟರ್ ಮೀಡಿಯೆಟ್ ಫೇಲಾದ್ದರಿಂದ ಮತ್ತೆ ಬಿಡುವು ಸಿಕ್ಕಿತು. ಎನ್. ಸೂರಪ್ಪನವರ ನೇತೃತ್ವದಲ್ಲಿ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದರು. ಗೆಳೆಯರೆಲ್ಲಾ ಸೇರಿ 'ನವಭಾರತ ತರುಣ ಕಲಾವಿದರು' ಎಂಬ ಹವ್ಯಾಸಿ ನಾಟಕ ತಂಡವನ್ನು ಕಟ್ಟಿದರು. ಇದರ ನೇತಾರ ಸಿ. ಟಿ. ಎನ್. ನಾಯ್ಕರ್. ಈ ಅರೆವೃತ್ತಿರಂಗ ಕಲಾವಿದರು ಅರಳುವ ಕಲಾಕುಸುಮಗಳು. ಅವರು ಅಭಿನಯ ಅಭ್ಯಾಸವಿದ್ದವರಲ್ಲ; ಹೆಚ್ಚಿನ ಶಿಕ್ಷಣವೂ ಇದ್ದವರಲ್ಲ. ಆ ಕಲಾವಿದರಲ್ಲಿ ಔಷಧಿ ಅಂಗಡಿಯಿಟ್ಟು ವ್ಯಾಪಾರ ಮಾಡುವವ, ಬಳೆ ಅಂಗಡಿ ಮಾಲೀಕ, ಕಿರಾಣಿ ಅಂಗಡಿಯವ, ಹೂವಿನ ಅಂಗಡಿಯವ, ಸೈಕಲ್ ಷಾಪು ಇಟ್ಟವ, ಚುರಮುರಿ ಮಾರುವವನು– ಇಂಥ ಸಾಮಾನ್ಯ ಜನ. ಇವರು ಆಡುತ್ತಿದ್ದ ವೀರ ಮದಕರಿ ನಾಯಕ ಬಹಳ ಪ್ರಸಿದ್ಧವಾಯಿತು, ಬೇರೆ ಬೇರೆ ಊರುಗಳ ಆಹ್ವಾನದ ಮೇರೆಗೆ ನೂರಾರು ಪ್ರಯೋಗಗಳನ್ನು ಅವರು ನಡೆಸಿದರು. ಇದರ ಕೀರ್ತಿ ಎಲ್ಲೆಲ್ಲೂ ಹರಡಿತು. ಅರಮನೆ ಕಾರ್ಯದರ್ಶಿ ಹೆಚ್. ಎನ್. ಪಾಳೇಗಾರರ ಮೂಲಕ ಮೈಸೂರು ಮಹಾರಾಜ ಜಯಚಾಮರಾಜ ಒಡೆಯರರಿಗೂ ಮುಟ್ಟಿತು. ಅರಮನೆಯಿಂದ ನಾಟಕ ಪ್ರದರ್ಶಿಸಲು ಆಹ್ವಾನ ಬಂತು. ೧೯೫೮ ರ ಸುಮಾರಿಗೆ ಮೈಸೂರಿನ ಜಗನ್ಮೋಹನ ಪ್ಯಾಲೇಸ್‌ನಲ್ಲಿ ಈ ನಾಟಕ ರಂಗವೇರಿತು. ಮಹಾರಾಜರು, ಅರಮನೆಯ ರಾಣಿವಾಸದವರು, ಅಧಿಕಾರಿಗಳು ಮೊದಲಾದ ಗಣ್ಯರ ಎದುರು ಈ ನಾಟಕ ನಡೆಯಿತು. ಮಹಾರಾಜರು ನಾಟಕ ಪೂರ್ತಿಯಿದ್ದು ತುಂಬಾ ಆನಂದಪಟ್ಟು ಕಲಾವಿದರನ್ನು ಅಭಿನಂದಿಸಿ ಹೆಚ್ಚಿನ ಸಂಭಾವನೆಯನ್ನು ಕೊಡಿಸಿದರು.

ಸೋಮಣ್ಣ ನಾಟಕದ ಗೀಳು ಹಚ್ಚಿಕೊಂಡ ಕಾಲ ನಾಟಕ ಆಡುವವರ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲದ ಕಾಲ. ಜನರಲ್ಲಿ ನಾಟಕದವರು ಎಂದರೆ ಪೋಲಿಗಳೆಂಬ ಅಪಪ್ರಥೆಯಿತ್ತು. ಈ ಕಾರಣಕ್ಕಾಗಿಯೇ ಸೋಮಣ್ಣ ಕೆಲಕಾಲ ಸಾಮಾಜಿಕವಾಗಿ, ಸಾಂಸಾರಿಕವಾಗಿ ಅವಜ್ಞೆಗೆ ಗುರಿಯಾಗಿದ್ದರು. ಏನೇ ಆದರೂ ಅವರ ಜೀವನದ ಜೀವವಾಗಿದ್ದ ನಟನ ಕಲೆಯನ್ನು ಅವರು ಬಿಡಲು ತಯಾರಾಗಿರಲಿಲ್ಲ. ಅವರಿಗೆ ನಾಟಕದ ಹುಚ್ಚು ಎಷ್ಟಿತ್ತೆಂದರೆ ಎಲ್ಲಾ ನಾಟಕಗಳಲ್ಲಿ ಭಾಗವಹಿಸಲು ಅವಕಾಶವಿಲ್ಲವಾದಾಗ ಮನೆಯಲ್ಲಿ ತಾವೊಬ್ಬರೇ ನಾಟಕದ ಪೋಷಾಕನ್ನು ಧರಿಸಿ ಕನ್ನಡಿ ಎದುರು ಏಕಪಾತ್ರಾಭಿನಯ ಮಾಡಿ ಆನಂದಿಸುತ್ತಿದ್ದರು. ಉತ್ತರ ಕರ್ನಾಟಕದ ಅರೆವೃತ್ತಿ ನಾಟಕ ತಂಡದೊಡನೆ ಸೇರಿ ನಾಟಕ ನಡೆಸಿದ್ದೂ ಉಂಟು. 'ಅಮ್ಮ ರಿಟೈರ್ ಆಗ್ತಾಳೆ' ಎಂಬ ಮರಾಠೀ ನಾಟಕದ ಅನುವಾದವನ್ನು ಮೂವತ್ತಕ್ಕೂ

ಹೆಚ್ಚು ಪ್ರಯೋಗಗಳನ್ನು ಮಾಡಿ, ಅಪಾರ ಜನಮನ್ನಣೆಯನ್ನು ಗಳಿಸಿದ್ದುಂಟು. ಆಗ ಅರೆವೃತ್ತಿನಾಟಕ ಕಲಾವಿದರ ಸಮಸ್ಯೆಗಳನ್ನು ನಿಕಟವಾಗಿ ತಿಳಿದುಕೊಳ್ಳಲು ಅವಕಾಶವಾಯಿತು.

ತುಮಕೂರಿನಲ್ಲಿ ಬಿ. ಎ. ಓದುವಾಗ ಮತ್ತೆ ಅವರ ನಾಟಕಕ್ರಿಯೆ ಆರಂಭಗೊಂಡಿತು. ಬಹುಮಟ್ಟಿಗೆ ಗದಾಯುದ್ಧ, ಎಚ್ಚಮನಾಯಕ, ವೀರ ಮದಕರಿ ನಾಯಕ ಮೊದಲಾದ ನಾಟಕಗಳ ಮುಖ್ಯ ಪಾತ್ರಗಳ ಸಂಭಾಷಣೆಯನ್ನು ಹೊಂದಿಸಿ ಏಕಪಾತ್ರಾಭಿನಯ ಮಾಡಿದರು. ಸೋಮಣ್ಣನಿಗೆ ಸೂಕ್ತ ಅವಕಾಶ, ಮಾರ್ಗದರ್ಶನ, ಪ್ರೋತ್ಸಾಹ ಸಿಕ್ಕಲು ಮತ್ತೆರಡು ವರ್ಷ ಕಾಯಬೇಕಾಯಿತು.

ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ. ಎ. ಆನರ್ಸ್‌ಗೆ ಸೇರಿದಾಗ ಅಲ್ಲಿನ ರಂಗಸಂಪನ್ನರಿಂದ ಸೋಮಣ್ಣನಿಗೆ ನಿಜವಾದ ತರಬೇತಿ ಸಿಕ್ಕಿತು. ಪ್ರಸಿದ್ಧ ರಂಗ ಕಲಾವಿದ ಸಂಪತ್ (ಚೆಲುವ ಅಯ್ಯಂಗಾರ್) ಹಾಗೂ ಇಂಗ್ಲಿಷ್ ಪ್ರಾಧ್ಯಾಪಕ ಆರ್. ಗುರುರಾಜಾರಾವ್ ಅವರ ಗರಡಿಯಲ್ಲಿ ನುರಿತರು. ಪ್ರಿನ್ಸಿಪಾಲ್ ಸಿ. ಡಿ. ನರಸಿಂಹಯ್ಯನವರ ಪ್ರೋತ್ಸಾಹವೂ ಇತ್ತು. ಆಡುವ ಮಾತಿನ ಉಚ್ಚಾರ, ಕಣ್ಣು, ಹಣೆಯ ಗೆರೆ, ಕುತ್ತಿಗೆಯ ಕೊಂಕು, ಕೈಕಾಲುಗಳ ಭಂಗಿ, ಉಸಿರಾಟದ ಏರಿಳಿತ ಮೊದಲಾದವುಗಳ ಬಗ್ಗೆ ನಟನಿಗಿರಬೇಕಾದ ಅಭ್ಯಾಸ ಅವರಿಗೆ ಮನದಟ್ಟಾಯಿತು. ಸಂಪತ್ ಅವರ ರಂಗತಾಲೀಮಿನಲ್ಲಿ ಸೋಮಣ್ಣ ಕಲಿತದ್ದು ಅಪಾರ. ಒಂದು ಕಡೆ ಅಭಿನಯ ಕಲೆಯ ಸೂಕ್ಷ್ಮಾತಿಸೂಕ್ಷ್ಮ ರೀತಿ ನೀತಿಗಳ ನಿಕಟ ಪರಿಚಯವಾದಂತೆ ರಂಗಕಲೆ, ರಂಗಪರಿಕರಗಳ ಬಗ್ಗೆ ಅವರು ನಡೆಸುತ್ತಿದ್ದ ಚರ್ಚೆಯಿಂದ ಅತ್ಯಂತ ಉಪಯುಕ್ತ ಮಾಹಿತಿ ಸಿಕ್ಕುತ್ತಿತ್ತು. ಹೀಗಾಗಿ ನಾಟಕದ ಬಗೆಗಿನ ಥಿಯರಿ ಮತ್ತು ಪ್ರ್ಯಾಕ್ಟಿಕಲ್ ಎರಡೂ ಲಭ್ಯವಾಗುತ್ತಿತ್ತು. ಅವರ ಅಭಿನಯದಲ್ಲಿ ಸಾಕಷ್ಟು ಸುಧಾರಣೆ ಕಾಣಿಸತೊಡಗಿತು. ಆಗ ಅವರು ಆಷಾಢಭೂತಿ, ಅಬ್ಬಾ ನನ್ನ ಹೆಂಡತಿ, ವಿಗಡ ವಿಕ್ರಮರಾಯ, ಅಂಗುಲಿಮಾಲ, ಗದಾಯುದ್ಧ ನಾಟಕ ಮೊದಲಾದ ಕನ್ನಡ ನಾಟಕಗಳಲ್ಲಿಯೂ, ಜ್ಯುಲಿಯಸ್ ಸೀಜರ್, ಹ್ಯಾಮ್‌ಲೆಟ್, ಟೆಂಪೆಸ್ಟ್ ಮೊದಲಾದ ಇಂಗ್ಲಿಷ್ ನಾಟಕಗಳಲ್ಲೂ ಅಭಿನಯಿಸಿದರು.

ಅಭಿನಯದಲ್ಲಿ ಲೋಪದೋಷಗಳು ಕಂಡರೆ ತಿದ್ದಿ ಹೇಳುವ, ಸಂಭಾಷಣೆಯಲ್ಲಿನ ಉಚ್ಚಾರವನ್ನು ಸರಿಪಡಿಸುವ ರಂಗಶ್ರೇಷ್ಠರು ಅಲ್ಲಿದ್ದರು, ಪ್ರಾಧ್ಯಾಪಕರು ಅಲ್ಲಿದ್ದರು. ಆ ನಾಟಕಗಳನ್ನು ತೀ. ನಂ. ಶ್ರೀ., ಡಿ. ಎಲ್. ಎನ್., ಕೆ. ವೆಂಕಟರಾಮಪ್ಪ, ಸಿ. ಡಿ. ನರಸಿಂಹಯ್ಯ ಮೊದಲಾದವರು ನೋಡಿ ಮುಕ್ತಕಂಠದಿಂದ ಪ್ರಶಂಸೆ ಮಾಡುತ್ತಿದ್ದರು.

ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ 'ಅಬ್ಬಾ ಏನ್ ಹೆಂಡ್ತಿ' ಎಂಬ ನಾಟಕವನ್ನು ಪ್ರದರ್ಶಿಸಲು ಮೈಸೂರಿನ ಹವ್ಯಾಸಿಕಲಾವಿದರು ತೀರ್ಮಾನಿಸಿದರು. ಎಂ. ರಾಮರಾಯರು ನಾಟಕವನ್ನು ನಿರ್ದೇಶಿಸುತ್ತಿದ್ದರು. ಸಿಂಧುವಳ್ಳಿ ಅನಂತಮೂರ್ತಿ, ಟಿ. ಎನ್. ಶೇಷಾದ್ರಿ, ಸೋಮಣ್ಣ ಮೊದಲಾದವರು ಪಾತ್ರಧಾರಿಗಳು. ಅಂದು ಭಾಷಣಗಳ ಅಬ್ಬರದಲ್ಲಿ ಸ್ಟೇಜು ಖಾಲಿಯಾಗದೆ ಫಜೀತಿಯಾಗಿ ಅರ್ಧ ಹೊತ್ತಿನಲ್ಲಿ ನಾಟಕ ಆಡಿದ್ದನ್ನು ಆ ಕಲಾವಿದರು ಸ್ಮರಿಸುತ್ತಾರೆ.

ಇನ್ನೊಂದು ಜನಪ್ರಿಯ ನಾಟಕ ಮೈಸೂರು ಪುರಭವನದಲ್ಲಿ ಯಶಸ್ವಿಯಾಗಿ ಪ್ರದರ್ಶಿತವಾಯಿತು. ಅದೇ ಡಾ. ಪ್ರಭುಶಂಕರರ "ಅಂಗುಲಿಮಾಲ". ಅಭಿನಯದ ಮಾತಿರಲಿ, ಸಂಭಾಷಣೆಯೇ ಕಷ್ಟವೆನಿಸುವ ಈ ನಾಟಕದ ತಾಲೀಮು ತಿಂಗಳುಗಟ್ಟಲೆ ನಡೆಯಿತು. ಇದರ ನಿರ್ದೇಶನ ಸೋಮಣ್ಣನದಾದರೆ, ಸಂಗೀತ ಅಳವಡಿಸಿದವರು ಮೈಸೂರು ಅನಂತಸ್ವಾಮಿ. ಮೈಸೂರಿನ ಪ್ರತಿಷ್ಠಿತ ವ್ಯಕ್ತಿಗಳೆಲ್ಲರೂ ನಾಟಕ ನೋಡಲು ಬಂದಿದ್ದರು. ನಾಟಕವು ಆಕರ್ಷಕ ರೀತಿಯಲ್ಲಿ ಆರಂಭವಾಗಿ ಸುಗಮ ನಡೆಯಲ್ಲಿ ತಡೆಯಿಲ್ಲದ ಪ್ರವಾಹದಂತೆ ಸರಾಗವಾಗಿ ಸಾಗಿ ಕೊನೆಮುಟ್ಟಿತು. ಭಗವಾನ್ ಬುದ್ಧನಂಥ ಕರುಣಾಮಯಿಯ ಎದುರು ನರರಾಕ್ಷಸ ಅಂಗುಲಿಮಾಲನ ಪಾತ್ರದಲ್ಲಿ ಸೋಮಣ್ಣ ರಾಕ್ಷಸಗುಣಗಳನ್ನೆಲ್ಲಾ ತನ್ನಲ್ಲಿ ಆವಾಹಿಸಿಕೊಂಡಂತೆ ನಟಿಸಿದ್ದರು. ಅದೇ ನಾಟಕದಲ್ಲಿಯೇ ಕೊರಡೊಂದು ಕಳಚಿಬಿದ್ದು ನೋವಾದರೂ ತಾದಾತ್ಮ್ಯದಿಂದ ನಟಿಸಿ ನಾಟಕದ ನಂತರ ಆಸ್ಪತ್ರೆಗೆ ಹೋದುದನ್ನು ಸೋಮಣ್ಣ ನೆನೆಯುತ್ತಾರೆ. ಇದೊಂದು ಸಹಾಯಾರ್ಥ ಪ್ರದರ್ಶನವಾಗಿತ್ತು. ಬಡವೆಯೊಬ್ಬಳ ಎರಡು ಹೆಣ್ಣು ಮಕ್ಕಳ ಮದುವೆಗೆ ಹಣ ಸಹಾಯ ಮಾಡಿದ ಪುಣ್ಯ ಈ ಹವ್ಯಾಸಿ ಕಲಾವಿದರದಾಯಿತು.

ಆಗ ಮೈಸೂರಿನಲ್ಲಿ ಯುವಜನೋತ್ಸವ ಕಾರ್ಯಕ್ರಮ ಜರುಗಿತು. ಯುವ ಪ್ರತಿಭೆಗಳು ಮಿಂಚಲು ಒಳ್ಳೆಯ ಅವಕಾಶ. ಆದರೆ ವಿದ್ಯಾರ್ಥಿಗಳಲ್ಲೇ ಗುಂಪುಗಾರಿಕೆಯಾಗಿ ಕಲ್ಲುತೂರಾಟ, ದೊಂಬಿ, ಪೋಲೀಸರ ಲಾಠಿ ಪ್ರಹಾರದಲ್ಲಿ ಪರ್ಯಾವಸಾನವಾಯಿತು.

ಮುಂದೊಂದು ಮಹತ್ವದ ಸಂದರ್ಭ ಒದಗಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವ, ನೂತನ ಪದವೀಧರರಿಗೆ ಪದವಿ ಪ್ರದಾನ ಸಮಾರಂಭ. ಆ ಕಾಲಕ್ಕೆ ಅದು ಒಂದು ಶಿಸ್ತುಬದ್ಧ, ಗೌರವಪೂರ್ಣ ವರ್ಣರಂಜಿತ ಸಮಾರಂಭವೆನಿಸಿತ್ತು. ನೂತನ ಪದವೀಧರರು ತಾವು ಗಳಿಸಿದ ಪದವಿ ಸೂಚಕ ನಿಲುವಂಗಿ ಧರಿಸಿ, ಮೈಸೂರು ಪೇಟ ಧರಿಸಿ ಸಾಲಾಗಿ ಬಂದು ಆಗಿನ ಕುಲಪತಿಗಳಾದ ಮಹಾರಾಜ ಜಯಚಾಮರಾಜ ಒಡೆಯರ್ ಅವರಿಂದ ಪದವಿ ಪ್ರಶಸ್ತಿ ಪತ್ರಗಳನ್ನು ಪಡೆಯುತ್ತಿದ್ದರು. ಅಂದೇ ಸಂಜೆ ಮಹಾರಾಜರು ನೂತನ ಪದವೀಧರರಿಗೆ ವಿಶ್ವವಿದ್ಯಾಲಯದ ಕ್ರಾಫರ್ಡ್ ಹಾಲಿನಲ್ಲಿ ರಾಜೋಚಿತ ಉಪಾಹಾರ

ಏರ್ಪಡಿಸುತ್ತಿದ್ದರು. ಅದಾದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸಂಪತ್ ಮತ್ತು ಗುರುರಾಜಾರಾವ್ ಅವರು ಜಂಟಿಯಾಗಿ ನಿರ್ದೇಶಿಸಿದ ಒಂದು ನಾಟಕ ಅಂದು ಪ್ರಯೋಗಿಸಲ್ಪಟ್ಟಿತು. ಅದೇ ಪ್ರೊ. ಎ. ಎನ್. ಮೂರ್ತಿರಾವ್ ಅವರ "ಆಷಾಢಭೂತಿ". ಅದರಲ್ಲಿ ಸೋಮಣ್ಣನದು ಮುಖ್ಯ ಪಾತ್ರ, ಅಂದರೆ ಸುಬ್ಬಾಶಾಸ್ತ್ರಿ ಪಾತ್ರ. ಆ ಪಾತ್ರವು ಕಾಮುಕತೆ, ದುಷ್ಟತನ, ನಯವಂಚಕತನದ ಪ್ರತೀಕ. ಸೋಮಣ್ಣ ಆ ಪಾತ್ರದ ಪರಕಾಯ ಪ್ರವೇಶ ಮಾಡಿದಂತಿತ್ತು. ಸೋಮಣ್ಣನ ಪ್ರತಿ ಮಾತಿಗೂ ಪ್ರೋತ್ಸಾಹದ ಕೂಗು, ಪ್ರಚಂಡ ಕರತಾಡನ. ಆ ನಾಟಕ ಅತ್ಯುತ್ತಮ ಪ್ರದರ್ಶನವೆಂದು ಅಗ್ಗಳಿಕೆ ಪಡೆಯಿತು. ದೊಡ್ಡವರು ಬಂದು ಶಹಬಾಸ್‌ಗಿರಿ ಹೇಳಿದಾಗ ನಾಟಕ ಆಡಿದವರಿಗೆ ಹೇಳಿಕೊಳ್ಳಲಾಗದಷ್ಟು ಸಂತೋಷ ಮತ್ತು ಧನ್ಯತಾ ಭಾವ. ನಾಟಕ ಸಂಗೀತ ಸಾಹಿತ್ಯಾದಿ ಚಟುವಟಿಕೆಗಳ ಕೇಂದ್ರಶಕ್ತಿ ಪ್ರೊ. ಸಿ. ಡಿ. ನರಸಿಂಹಯ್ಯನವರ ಪ್ರೋತ್ಸಾಹವನ್ನು ಕಲಾವಿದರೆಲ್ಲರೂ ಸ್ಮರಿಸುತ್ತಾರೆ.

ಯಾವುದೇ ಒಂದು ತಂಡ ಒಂದು ನಾಟಕವನ್ನು ಪ್ರದರ್ಶಿಸಲು ಕೈಗೆತ್ತಿಕೊಂಡರೆ ಸೋಮಣ್ಣ ಅದಕ್ಕೆ ತನ್ನನ್ನು ಎಷ್ಟರ ಮಟ್ಟಿಗೆ ತೊಡಗಿಸಿಕೊಳ್ಳುತ್ತಿದ್ದರೆಂದರೆ ಇಡೀ ನಾಟಕದ ಸಂಭಾಷಣೆ, ಹಾಡುಗಳು ಅವರಿಗೆ ಕಂಠಪಾಠವಾಗುತ್ತಿತ್ತು. ಸಣ್ಣ ಪುಟ್ಟ ನಾಟಕಗಳ ಮಾತಿರಲಿ ರಾತ್ರಿ ೧೦ ಗಂಟೆಗೆ ಆರಂಭವಾಗಿ ಬೆಳಗಿನ ವರೆಗೆ ನಡೆವ ಸುದೀರ್ಘ ನಾಟಕವಾಗಿರಲಿ ಅವು ಅವರ ಮನದಲ್ಲಿ ನೆಲೆಯಾಗಿರುತ್ತಿದ್ದವು. ಯಾರಾದರೂ ಕಲಾವಿದ ಗೈರು ಹಾಜರಾದರೆ ಸೋಮಣ್ಣ ಆ ಪಾತ್ರವನ್ನು ನಿರ್ವಹಿಸುತ್ತಿದ್ದರು. ಮುಂದೊಮ್ಮೆ ಜೋಕುಮಾರಸ್ವಾಮಿ ನಾಟಕ ಆಡುವ ಪ್ರಸಂಗದಲ್ಲಿ ಗೌಡರ ಪಾತ್ರ ಮಾಡುತ್ತಿದ್ದ ಗಿರೀಶ ಕಾರ್ನಾಡ್ ಅಮೇರಿಕದಲ್ಲಿದ್ದರು. ಆ ಪಾತ್ರ ಮಾಡಲು ಸೋಮಣ್ಣನನ್ನು ಕೇಳಿದರು. ತುಂಬಾ ಅಳುಕಿನಿಂದಲೇ ಒಪ್ಪಿಕೊಂಡ ಅವರು ಅತ್ಯಂತ ಯಶಸ್ವಿಯಾಗಿ ಆ ಪಾತ್ರವನ್ನು ನಿರ್ವಹಿಸಿ ಜನರ ಮೆಚ್ಚಿಗೆ ಪಡೆದರು. ರಾಜನ ಪಾತ್ರವೇ ಬೇಕು, ಸೇವಕ ಪಾತ್ರ ಬೇಡ ಎಂಬ ಮಾತೇ ಇಲ್ಲ. ನಾಟಕ ಒಂದು ಸಂಘಟಿತ ಪ್ರಯತ್ನ, ಅವರಲ್ಲಿ ಎಲ್ಲ ಕಲಾವಿದರ ಸಮಪಾಲು ಇದೆ ಎಂಬ ವಿಶಾಲ ದೃಷ್ಟಿ ಅವರದು. ರಂಗಕಲೆಯಲ್ಲಿನ ಅವರ ಯಶಸ್ಸಿನ ಗುಟ್ಟು ಇದೇ.

ಮೈಸೂರು ಶಾರದಾ ವಿಲಾಸ ಕಾಲೇಜಿನಲ್ಲಿ ಎ. ಎಸ್. ಮೂರ್ತಿಯವರ 'ಹುಚ್ಚ' ನಾಟಕವನ್ನು ಸೋಮಣ್ಣ ನಿರ್ದೇಶಿಸಿದ್ದರು. ಮೈಸೂರು ಅನಂತಸ್ವಾಮಿ ಸಂಗೀತ ನೀಡಿದ್ದರು. ಬೆಂಗಳೂರಿನಲ್ಲಿ ನಡೆದ ಉಲ್ಲಾಳ್ ಶೀಲ್ಡ್ ನಾಟಕ ಸ್ಪರ್ಧೆಯಲ್ಲಿ 'ಕ್ಷೇತ್ರದ ಕಾಗೆ' ಯನ್ನು ಪ್ರದರ್ಶಿಸಿದರು. ಅದರಲ್ಲಿ ಸೋಮಣ್ಣ ಮುಖ್ಯ ಪಾತ್ರದಲ್ಲಿದ್ದರು. ಆ ನಾಟಕವು ಪ್ರೇಕ್ಷಕರ ಮೆಚ್ಚಿಗೆಯನ್ನು ಗಳಿಸಿತು. ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಈ ಪ್ರದರ್ಶನದಿಂದ ಸೋಮಣ್ಣನಿಗಾದ ದೊಡ್ಡ ಲಾಭವೆಂದರೆ

ಎ. ಎಸ್. ಮೂರ್ತಿ ಹಾಗೂ ಮೇಕಪ್ ನಾಣಿಯವರ ಪರಿಚಯವಾದದ್ದು. ಇದರಿಂದ ಸೋಮಣ್ಣನ ಪ್ರವೃತ್ತಿ ವಿಲಾಸಕ್ಕೆ ದೊಡ್ಡ ಶಕ್ತಿ ಒದಗಿದಂತಾಯಿತು.

ಉದ್ಯೋಗ ನಿಮಿತ್ತವಾಗಿ ಉತ್ತರ ಕರ್ನಾಟಕದ ಕಡೆ ಹೋಗಿ ಇದ್ದಾಗ ಅಲ್ಲಿನ ಕಂಪನಿ ನಾಟಕಗಳನ್ನು ನೋಡುತ್ತ ಹೋಗುತ್ತಿದ್ದರು. ಅಲ್ಲಿನ ಆಡುಮಾತಿನ ಧಾಟಿ ಅವರಿಗೆ ವಿಶಿಷ್ಟವಾಗಿ ಕಾಣುತ್ತಿತ್ತು. ನಾಟಕ ನೋಡ್ತಾ ನೋಡ್ತಾ ಎಲ್ಲ ಕೆಲಸ ಬಿಟ್ಟು ವೃತ್ತಿ ನಾಟಕ ಕಂಪನಿಯನ್ನು ಯಾಕೆ ಸೇರಿಬಿಡಬಾರದು ಅನ್ನಿಸುತ್ತಿತ್ತಂತೆ!

ಸೋಮಣ್ಣನಿಗೆ ಮದುವೆಯಾಗಿ, ಬೆಂಗಳೂರಿನಲ್ಲಿ ರಾಷ್ಟ್ರೀಕೃತ ಬ್ಯಾಂಕು ಕೆನರಾ ಬ್ಯಾಂಕಿನಲ್ಲಿ ನಿಶ್ಚಿತ ಕೆಲಸವೂ ಸಿಕ್ಕಿದ ಮೇಲೆ ಕೆಲಸದ ಒತ್ತಡ, ಸಂಸಾರದ ಜವಾಬ್ದಾರಿಗಳು ಹೆಚ್ಚಿದವು. ಆದರೆ ಬಣ್ಣದ ಗೀಳು ಅವರನ್ನು ಬಿಟ್ಟಿರಲಿಲ್ಲ. ಅದಮ್ಯವಾದ ಈ ಪ್ರವೃತ್ತಿಗೆ ಅವಕಾಶ ದೊರಕಲು ತಡವಾಗಲಿಲ್ಲ. ಒಮ್ಮೆ ಖ್ಯಾತ ನಾಟಕಕಾರ ಪಿ. ಲಂಕೇಶ್ ಅನಿರೀಕ್ಷಿತವಾಗಿ ಸೋಮಣ್ಣನನ್ನ ಕಚೇರಿಯಲ್ಲಿ ಭೇಟಿ ಮಾಡಿದರು. ತಮ್ಮ ಒಂದು ನಾಟಕದಲ್ಲಿ ಪಾತ್ರ ವಹಿಸಲು ಆಹ್ವಾನಿಸಿದರು. ಅದೇ 'ನನ್ನ ತಂಗಿಗೊಂದು ಗಂಡು ಕೊಡಿ'. ಆ ನಾಟಕದಲ್ಲಿ ಸೋಮಣ್ಣನದು ಒಂದು ಪುಢಾರಿಯ ಪಾತ್ರ. ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಗಿರೀಶ ಕಾರ್ನಾಡರ ಅಧ್ಯಕ್ಷತೆಯಲ್ಲಿ ನಡೆದ ಈ ನಾಟಕ ತುಂಬಾ ಯಶಸ್ವಿಯಾಯಿತು. ಪತ್ರಿಕೆಗಳು ಈ ರಂಗಪ್ರಯೋಗವನ್ನು ಮುಕ್ತಕಂಠದಿಂದ ಪ್ರಶಂಸಿಸಿ ಬರೆದವು.

ಬೆಂಗಳೂರಿಗೆ ಬಂದ ಮೇಲೆ ಸೋಮಣ್ಣನಿಗೆ ಅ. ನ. ಸುಬ್ಬರಾಯರ ಕಲಾಮಂದಿರದ ಸಂಪರ್ಕವಾಯಿತು. ಈ ಕಲಾಮಂದಿರ ಅನೇಕ ಕಲೆಗಳ ಶಿಕ್ಷಣಕ್ಕೆ, ಪ್ರಕಾಶನಕ್ಕೆ ಹೆಸರಾಗಿತ್ತು. ಅವರ ಮಗ ಎ. ಎಸ್. ಮೂರ್ತಿ "ಚಿತ್ರಕಲಾವಿದರು" ಎಂಬ ಸಂಸ್ಥೆಯನ್ನು ಕಟ್ಟಿದ್ದರು. ಅಲ್ಲಿ ಪ್ರತಿಭಾಶಾಲಿ ಯುವಕ - ಯುವತಿಯರನ್ನು ಗುರುತಿಸಿ, ಅವರಿಗೆ ಯೋಗ್ಯ ತರಬೇತಿ ನೀಡಿ ರಂಗಪ್ರವೇಶ ಮಾಡಿಸುತ್ತಿದ್ದರು. ನಾಟಕ ಪ್ರದರ್ಶನಗಳಲ್ಲಿ ನವೀನ ಪ್ರಯೋಗಗಳನ್ನು ಅವರು ಮಾಡುತ್ತಿದ್ದರು. ಈ ಕಮ್ಮಟದಿಂದ ಹೊರಬಿದ್ದ ನಟನಾಣ್ಮಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಎ. ಎಸ್. ಮೂರ್ತಿಯವರ 'ಕನ್ನಡಿಯ ಹಿಂದೆ' ನಾಟಕವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಮೊಟ್ಟಮೊದಲಿಗೆ ಸಾದರ ಪಡಿಸಿದವರು ಸೋಮಣ್ಣನೇ.

ರಂಗಭೂಮಿಯ ಮಾತುಗಾರಿಕೆಯ ಬಗ್ಗೆ ಪ್ರಸ್ತಾಪ ಬಂದಾಗ ಪಾತ್ರಧಾರಿ ನಾಟಕಕಾರ ಬರೆದ ಮಾತುಗಳಿಗೆ ಸೀಮಿತವಾಗಬೇಕೆ? ಅಥವಾ ಪ್ರಸಂಗೋಚಿತವಾಗಿ ಸಮಾಕಾಲೀನ ವಿದ್ಯಮಾನಗಳನ್ನು ಸೇರಿಸಿಕೊಂಡು ಪ್ರೇಕ್ಷಕರಿಗೆ ಕಚಗುಳಿಯಿಡಬಹುದೆ? ಎಂಬುದಕ್ಕೆ ಒಂದು ನಾಟಕದ ಸನ್ನಿವೇಶವೊಂದನ್ನು ನೆನೆಯಬಹುದು.

ಒಂದು ನಾಟಕದಲ್ಲಿ ಶಿವರಾಂ ಮತ್ತು ಸೋಮಣ್ಣ ಮಾತನಾಡುತ್ತಾ ಬರುತ್ತಾರೆ. ಇಬ್ಬರೂ ವಿಚಾರವಂತರು, ವಾಚಾಳಿಗಳು, ನಾಟಕದಲ್ಲಿರುವ ಸಂಭಾಷಣೆಯಿಂದಲೇ ಆರಂಭಗೊಂಡ ಅವರ ಮಾತು ಪ್ರಸಂಗಾವಧಾನದಿಂದ ಬೆಳೆಯುತ್ತಾ ಪ್ರಸ್ತುತ ಸಮಾಚಾರಗಳನ್ನು ಟೀಕೆಗೆ ಒಳಪಡಿಸಿ ರಸವತ್ತಾದ ಮಾತುಗಳಿಂದ ಪ್ರೇಕ್ಷಕರನ್ನು ನಲಿಸುತ್ತಾ ಸಾಗಿದರು. ಹತ್ತು ನಿಮಿಷವಾದರೂ ಅವರ ಮಾತು ಮುಗಿಯುವಂತೆ ಕಾಣಲಿಲ್ಲ. ಪ್ರೇಕ್ಷಕರೂ ಕೂಡ ಆ ಮಾತುಗಳು ನಾಟಕಕ್ಕೆ ಸಂಬಂಧಿಸಿದುವೇ ಎಂದು ಆನಂದದಿಂದ ಕೇಳುತ್ತಾ ಮಗ್ನರಾಗಿದ್ದಾರೆ. ಆದರೆ ಮುಂದಿನ ದೃಶ್ಯಕ್ಕೆ ತಡವಾಯಿತೆಂಬ ಕಾತರ ನಿರ್ದೇಶಕನಿಗೆ. ಆ ಚತುರ ವಾಗ್ಮಿಗಳಾದ ಕಲಾವಿದರನ್ನು ಮೆಲ್ಲನೆ ಎಚ್ಚರಿಸಿ ಮುಂದಿನ ದೃಶ್ಯಕ್ಕೆ ತೆರವು ಮಾಡಿಸಿದರಂತೆ!

ರಂಗುರಂಗಾಗಿ ನಿರಂತರ ಬೆಳಗುವ ಕಲಾ ಪ್ರಕಾರ ರಂಗಭೂಮಿ ನಮ್ಮ ಕರ್ನಾಟಕ ರಂಗಭೂಮಿಯ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿಗೆ ಶ್ರೀಮಂತ ಪರಂಪರೆಯಿದೆ.. ಇದಕ್ಕೆ ಹೊಸ ತಿರುವು ಕೊಟ್ಟವರು ಬಿ. ವಿ. ಕಾರಂತ, ಶ್ರೀರಂಗ. ಮೊದಲಾದವರು. ಅರವತ್ತರ ದಶಕದಲ್ಲಿ ನಾಟಕರಂಗದಲ್ಲಿ ಹೊಸ ಪ್ರಯೋಗಗಳು ಮೊದಲಾದವು. ಬಯಲು ರಂಗಮಂದಿರದಲ್ಲಿ ನಾಟಕ ಪ್ರದರ್ಶನ ಆರಂಭವಾದವು. ಹೊಸ ಅನುಭವವನ್ನು ಕಟ್ಟಿಕೊಟ್ಟವು. ಜೋಕುಮಾರಸ್ವಾಮಿ, ಸಂಕ್ರಾಂತಿ, ಈಡಿಪಸ್ ಮೊದಲಾದ ನಾಟಕಗಳು ಜನರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದವು. ಒಳ್ಳೆಯ ನಾಟಕಗಳನ್ನು ಆಡಿದರೆ ಪ್ರೇಕ್ಷಕರ ಕೊರತೆಯಾಗದು ಎಂಬುದನ್ನು ಈ ನಾಟಕಗಳ ಪ್ರದರ್ಶನ ತೋರಿಸಿಕೊಟ್ಟಿತು. ಲಂಕೇಶರ ಸಂಕ್ರಾಂತಿಯಲ್ಲಿ ಸೋಮಣ್ಣ ಕೆಂಚನ ಪಾತ್ರ ವಹಿಸಿದ್ದರು. ತಾವು ಚಿಕ್ಕಂದಿನಲ್ಲಿ ಚಿತ್ರದುರ್ಗದಲ್ಲಿ ನಡೆಯುತ್ತಿದ್ದ ಮೊಹರಂನಲ್ಲಿ ನೋಡಿದ್ದ ಹುಲಿವೇಷದ ಕುಣಿತ ಅವರಿಗೆ ನೆರವಾಯಿತು. ಶ್ರೇಷ್ಠ ರಂಗಕರ್ಮಿಗಳಾದ ಕಾರಂತ, ಕಾರ್ನಾಡ್ ಅವರ ದಿಗ್ದರ್ಶನ ಸೋಮಣ್ಣನಿಗೆ ಸಿಕ್ಕಿತು. ಮೋಹನ್ ರಾಕೇಶ್ ಸ್ಮರಣಾರ್ಥ ದೆಹಲಿಯಲ್ಲಿ ನಡೆದ ನಾಟಕ ಸ್ಪರ್ಧೆಗೆ ಚಂದ್ರಶೇಖರ ಕಂಬಾರರ ಜೋಕುಮಾರಸ್ವಾಮಿ ನಾಟಕ ಒಯ್ಯಲು ತೀರ್ಮಾನಿಸಿದರು. ಗೌಡನ ಪಾತ್ರವನ್ನು ಸೋಮಣ್ಣನೇ ಮಾಡಬೇಕಾಯಿತು. ಕಾರಂತರ ನಿರ್ದೇಶನದಲ್ಲಿ ನಿರಂತರ ತಾಲೀಮು ನಡೆಯಿತು. ದೆಹಲಿಯ ಕಮಾನಿ ಥಿಯೇಟರ್‌ನಲ್ಲಿ ಈ ನಾಟಕ ಪ್ರದರ್ಶಿತವಾಯಿತು. ಸ್ಪರ್ಧೆಗೆ ಬೇರೆ ಬೇರೆ ಭಾಷೆಯ ನಾಟಕಗಳು ಬಂದಿದ್ದವು. ನಾಟಕ ಎಲ್ಲರ ಪ್ರಶಂಸೆ ಗಳಿಸಿತು. ಮುಂದೆ ಬಿ. ವಿ. ಕಾರಂತರ 'ಫೌಸ್ಟ್' ನಾಟಕದಲ್ಲಿ ಸೋಮಣ್ಣ ತಂದೆಯ ಪಾತ್ರದಲ್ಲಿ ರಂಜಿಸಿದರು.

ಪ್ರಸನ್ನ ಅವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾಗಿ ಬೆಂಗಳೂರಿಗೆ ಬಂದ ಮೇಲೆ ಸಮುದಾಯ ಗುಂಪಿನಲ್ಲಿ ಹೆಚ್ಚಾಗಿ ತೊಡಗಿಕೊಂಡರು.

ಲಂಕೇಶರ "ಟಿ. ಪ್ರಸನ್ನನ ಗೃಹಸ್ಥಾಶ್ರಮ" ನಾಟಕದಲ್ಲಿ, ಜಡಭರತರ "ಕದಡಿದ ನೀರು" ನಾಟಕಗಳಲ್ಲಿ ಸೋಮಣ್ಣ ಅಭಿನಯಿಸಿದರು. ಪ್ರದರ್ಶನಗಳು ಯಶಸ್ವಿಯಾಗಿ ಶ್ಲಾಘನೆಯನ್ನು ಪಡೆದವು. ಸೋಮಣ್ಣ ಸ್ವಾತಂತ್ರ್ಯ ಯೋಧನ ಪಾತ್ರ ವಹಿಸಿದ್ದ "ಕದಡಿದ ನೀರು" ಅನೇಕ ಕಡೆ ಪ್ರದರ್ಶನಗೊಂಡಿತು.

ಸೋಮಣ್ಣ ಮೈಸೂರಿಗೆ ವರ್ಗವಾಗಿ ಹೋದಾಗ ಅಲ್ಲಿನ ಸಮತೆಂತೋ (ಸರಸ್ವತಿಪುರಂ ಮಧ್ಯದ ತೆಂಗಿನ ತೋಟದ) ತಂಡದ ಮೂಲಕ ಅನೇಕ ಯಶಸ್ವೀ ನಾಟಕಗಳನ್ನು ಆಡಿದರು. ಜೋಕುಮಾರಸ್ವಾಮಿ, ವಿಗಡ ವಿಕ್ರಮರಾಯ, ಎಲ್ಲಾ ನಮ್ಮ ಮಕ್ಕಳೇ ಮೊದಲಾದ ನಾಟಕಗಳು ಪ್ರೊ. ಸಿ. ಡಿ. ನರಸಿಂಹಯ್ಯ ಅವರ ಧ್ವನ್ಯಾಲೋಕದಲ್ಲಿ ಪ್ರದರ್ಶನಗೊಂಡವು. ಅವನ್ನು ನಾಟಕಾಸಕ್ತರು ಯಾರೂ ಮರೆಯುವಂತಿಲ್ಲ.

ಅರೆವೃತ್ತಿ ರಂಗಭೂಮಿಯ ಹಾಗೂ ಹವ್ಯಾಸಿ ಕಲಾವಿದರ ಬಗ್ಗೆ ಸೋಮಣ್ಣನಿಗೆ ವಿಶೇಷ ಕಾಳಜಿ. ಹಿಂದೆ ಸರಿಯಾದ ಮೇಕಪ್, ರಂಗಪರಿಕರಗಳು, ಪಾತ್ರಗಳ ಪೋಷಾಕುಗಳು ಇಲ್ಲದ ಕಾಲದಲ್ಲಿ ಅವರು ಪಡುತ್ತಿದ್ದ ಪಾಡನ್ನು ಕಂಡು ಅಯ್ಯೋ ಅನ್ನಿಸಿದೆ. ಸ್ವತಃ ಅವರೇ ಪಾಡುಪಟ್ಟಿದ್ದಾರೆ. ನಾಟಕ ಆಡುವವರಿಗೆ ಇರುವ ಸಮಸ್ಯೆಗಳನ್ನು ಕುರಿತು ಅನುಭವ ಪೂರ್ವಕ ಅವರಲ್ಲದೆ ಮತ್ಯಾರು ಹೇಳಬೇಕು ? ತಮ್ಮ "ಸೋಮಣ್ಣ ಸ್ಟಾಕ್" (ಕರ್ಮವೀರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದದ್ದು) ಪ್ರಕಾಶಕರು : ತಾ. ರಾ. ನಾಗರಾಜ್, ೧೭, ೧ ನೇ ಮುಖ್ಯ ರಸ್ತೆ, ಬನಶಂಕರಿ ೩ ನೇ ಘಟ್ಟ ಬೆಂಗಳೂರು - ೮೫) ಕೃತಿಯಲ್ಲಿ ಹಾಸ್ಯಲೇಪಿತ ಶೈಲಿಯಲ್ಲಿ ವಿವರಿಸಿದ್ದಾರೆ. ನಾಟಕ ಆಡಲು ಬಣ್ಣ ಹಚ್ಚಿಕೊಳ್ಳುವುದು ಒಂದು ಕಷ್ಟವಾದರೆ, ಅದನ್ನು ಅಳಿಸುವುದು ಮತ್ತೊಂದು ಕಷ್ಟ. ನಾಟಕದ ಪಾತ್ರಕ್ಕೆ ಪೋಷಾಕು ಹೊಂದಿಸಿಕೊಳ್ಳುವಲ್ಲಿನ ತೊಡಕುಗಳು ಸಾಮಾನ್ಯದವಲ್ಲ. ರಾತ್ರಿಯೆಲ್ಲಾ ನಾಟಕ, ಹಗಲು ನಿದ್ರೆ, ಊರೂರಿನ ಜಾತ್ರೆ, ಸಂತೆ, ರಥೋತ್ಸವ ಮೊದಲಾದ ಸಂದರ್ಭಗಳಲ್ಲಿ ನಾಟಕ ಆಡುವುದು. ಆ ನಾಟಕಗಳಲ್ಲಿನ ಸ್ತ್ರೀ ಪಾತ್ರಗಳಿಗೆ ನಟಿಯರನ್ನು ಕರೆಸಲಾಗುತ್ತದೆ ಎಂಬ ವಿಶೇಷ ಆಕರ್ಷಣೆ ಒಡ್ಡುವುದು ಇವೆಲ್ಲವನ್ನು ಸೋಮಣ್ಣ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

## ಚಲನ ಚಿತ್ರರಂಗ

ನಾಟಕರಂಗದಲ್ಲಿ ಯಶಸ್ಸಿನ ಹಾದಿ ತುಳಿಯುತ್ತಾ ಸಾಗಿದ್ದ ಸೋಮಣ್ಣ ಚಲನಚಿತ್ರವನ್ನು ಪ್ರವೇಶಿಸಿದ್ದು ಚಲನಚಿತ್ರ ನಟ, ನಿರ್ಮಾಪಕ ಶಿವರಾಂ ಮೂಲಕವೇ. ಅವರು ಕರೆದು ಕೊಟ್ಟಿದ್ದು "ಹೃದಯ ಸಂಗಮ" ಚಿತ್ರದಲ್ಲಿನ ಡಾಕ್ಟರ್ ಪಾತ್ರ.

ಡಾ. ರಾಜಕುಮಾರ್ - ಭಾರತಿ, ಅಶ್ವತ್ಥ್ - ಪಂಢರೀಬಾಯಿ ಮೊದಲಾದ ಮೇರುನಟರ ಸಂಪರ್ಕ ಸೋಮಣ್ಣನಿಗೆ ಒದಗಿದ್ದು ಆಗಲೇ. ಶೂಟಿಂಗ್ ಮುಗಿದಿತ್ತು. "ನೀವು ನಿಜವಾಗಿ ಡಾಕ್ಟರಾ ?" ಎಂದು ರಾಜಕುಮಾರ್ ಸೋಮಣ್ಣನನ್ನು ಕೇಳಿದರಂತೆ ! ಅಂದರೆ ಸೋಮಣ್ಣನ ಅಭಿನಯ ಅಷ್ಟು ಸಹಜವಾಗಿತ್ತಂತೆ.

ಅನಂತರ ಅವರು ಮದರಾಸಿನಲ್ಲಿ ನಡೆದ ಒಂದು ಸಿನಿಮಾ ಶೂಟಿಂಗ್‌ಗೆ ಹೋಗಿದ್ದರು. ಅಗ ತಮಗಾದ ವಿಚಿತ್ರ ಅನುಭವಗಳನ್ನು ಗಂಟೆಗಟ್ಟಲೆ ಬೇಸರವಾಗದಂತೆ ವರ್ಣಿಸುತ್ತಾರೆ. "ಸಿನಿಮಾ ಪ್ರಪಂಚ ಒಂದು ಅದ್ಭುತ ಲೋಕ" ಎನ್ನುವ ಅವರು "ಅದು ಕೆಲವರಿಗೆ ಮಾವು, ಮತ್ತೆ ಕೆಲವರಿಗೆ ಬೇವು. ಮಾವಿನ ಸವಿಯನ್ನು, ಬೇವಿನ ಕಹಿಯನ್ನು ಬೆರಸಿಕೊಂಡು ಸೇವಿಸಿ ಬಾಳಬೇಕಾದ್ದು ಈ ಬಣ್ಣದ ಪ್ರಪಂಚದ ಪರಮಧರ್ಮ" ಎಂಬ ತೀರ್ಮಾನಕ್ಕೆ ಬರುತ್ತಾರೆ.

"ಗೀಜಗನ ಗೂಡು" ಚಿತ್ರದಲ್ಲಿ ಸೋಮಣ್ಣನಿಗೆ ಪ್ರೊಫೆಸರ್ ಪಾತ್ರ ಮಾಡಲು ಅವಕಾಶ ಸಿಕ್ಕಿತು. ಕಾರಾಪುರದ ಕಾಡಿನಲ್ಲಿ ಚಿತ್ರೀಕರಣ ನಡೆದಾಗ ಆ ಚಿತ್ರತಂಡದ ಸಾಹಸ ಕಾರ್ಯಗಳು ಎಷ್ಟು ರೋಮಾಂಚಕಾರಿಯಾಗಿದ್ದವೆಂದರೆ ಅದೇ ಒಂದು ಸಿನಿಮಾ ಆಗುವಷ್ಟಿತ್ತಂತೆ ! "ತ್ರಿವೇಣಿ" ಚಿತ್ರದಲ್ಲಿ ಉದಯಕುಮಾರ್ ಮತ್ತು ಕಲ್ಪನಾ ಜೊತೆ ಮನೆಯ ಸೇವಕನ ಪಾತ್ರ ಮಾಡಿದ್ದರು. ಅದರಲ್ಲಿ ಅವರ ಏಳು ವರ್ಷದ ಮಗ ಪ್ರಸನ್ನ ಬಾಲನಟನಾಗಿ ಅಭಿನಯಿಸಿದ್ದನು.

ಎಂದಿನ ಸಿನಿಮಾ ಜಾಡನ್ನು ಬಿಟ್ಟು ಹೊಸ ದಾರಿಯನ್ನು ತುಳಿದು ಮೂರು ಚಿತ್ರಗಳು ಬಂದವು. ಜಿ. ವಿ. ಅಯ್ಯರ್ ಅವರ "ನಾಳೆಗಳನ್ನು ಮಾಡುವವರು", ವಿ. ಆರ್. ಕೆ. ಪ್ರಸಾದ್‌ರ "ಪ್ರೇಮ-ಕಾಮ", ಎಸ್. ದಿವಾಕರರ "ಇತಿಹಾಸ" —ಈ ಮೂರೂ ಚಿತ್ರಗಳಲ್ಲಿ ಸೋಮಣ್ಣ ಪಾತ್ರ ವಹಿಸಿದ್ದರು. ಇವು ಉಳಿದ ಚಿತ್ರಗಳಂತೆ ಯಶಸ್ಸು ಕಾಣಲಿಲ್ಲ. ಆದರೆ ಸೋಮಣ್ಣನಿಗೆ ಚಲನಚಿತ್ರಜಗತ್ತಿನ ಅನೇಕ ಪ್ರತಿಷ್ಠಿತರ ಪರಿಚಯವಾಯಿತು.

ಸೋಮಣ್ಣ ಟಿ. ಎಸ್. ರಂಗಾ ಅವರ "ಸಾವಿತ್ರಿ" ಚಿತ್ರದಲ್ಲಿ ಅಭಿನಯಿಸಿದರು. ಅದು ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿತು. ಟಿ. ಎಸ್. ನರಸಿಂಹನ್‌ರ "೨೭. ಮಾವಳಿ ಸರ್ಕಲ್" ಚಿತ್ರದಲ್ಲಿ ಸೋಮಣ್ಣ ಗುಂಡಾ ಆಗಿ ಕಾಣಿಸಿಕೊಂಡಿದ್ದಾರೆ. ಗಿರೀಶ್ ಕಾಸರವಳ್ಳಿಯವರ "ಮನೆ", "ತಾಯಿಸಾಹೇಬ" ಚಿತ್ರಗಳಲ್ಲೂ ಸೋಮಣ್ಣ ಅಭಿನಯಿಸಿದ್ದಾರೆ. "ಸುಂದರ ಸ್ವಪ್ನಗಳು" ಚಿತ್ರದಲ್ಲಿನ ಇವರ ಅಭಿನಯವನ್ನು ಕಂಡು ಕೆ. ಬಾಲಚಂದರ್ ಸಹ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಹೀಗೆ ಚಲನ ಚಿತ್ರರಂಗದಲ್ಲೂ ಸಹ ಸೋಮಣ್ಣ ಮುಂದುವರಿದಿದ್ದಾಗ ಪರಭಾಷೆಯ ಚಿತ್ರಗಳಲ್ಲಿ ನಟಿಸಲು ಕರೆ ಬಂತು. ಆದರೆ ಅವರಿಗೆ ಕರ್ನಾಟಕ ಬಿಟ್ಟು ಹೊರಗೆ

ಹೋಗಲು ಇಷ್ಟವಿಲ್ಲ. ಅಲ್ಲದೆ ಕನ್ನಡಿಯ ಗಂಟಿಗಿಂತ ಕೈಯಲ್ಲಿರುವ ದಂಟೇ ಮೇಲು ಎಂಬುದು ಅವರ ತೀರ್ಮಾನ.

ಚಲನಚಿತ್ರಗಳಲ್ಲಿ ಸಣ್ಣಪುಟ್ಟದ್ದೂ ಸೇರಿದಂತೆ ಸೋಮಣ್ಣ ಅರವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಪಾತ್ರ ವಹಿಸಿದ್ದಾರೆ. ಅವುಗಳಲ್ಲಿ ಇವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟ ಶುದ್ಧ ಕೌಟುಂಬಿಕ ಚಿತ್ರ ರವಿ ನಿರ್ದೇಶನದ "ಮಿಥಿಲೆಯ ಸೀತೆಯರು." ಈ ಚಿತ್ರದಲ್ಲಿ ಸೋಮಣ್ಣನದು ಒಬ್ಬ ಬೇಜವಾಬ್ದಾರಿಯ, ಐಷರಾಮ ಪ್ರವೃತ್ತಿಯ ತಂದೆಯ ಪಾತ್ರ. ಜನರು ಇವರನ್ನು ಕಂಡಲ್ಲಿ ಗುರುತಿಸುವಂತಿದ್ದ ಪಾತ್ರವದು. ಇದಕ್ಕೆ ಜನರ ಆಯ್ಕೆಯ ಬರ್ಕ್ಲಿ ಪ್ರಶಸ್ತಿ ಬಂತು. ರವಿ ನಿರ್ದೇಶನದ "ಹರಕೆಯ ಕುರಿ"ಯಲ್ಲಿ ಸೋಮಣ್ಣನದು ರಾಜಕಾರಣಿಯ ಪಾತ್ರ. ಅದರಲ್ಲಿ ಅವರ ತಮ್ಮ ದತ್ತಾತ್ರೇಯ ಕೂಡ ಅಭಿನಯಿಸಿದ್ದಾರೆ.

## ದೂರದರ್ಶನ ಧಾರಾವಾಹಿಗಳು

ಕನ್ನಡದಲ್ಲಿ ದೂರದರ್ಶನದ ಕಾರ್ಯಕ್ರಮಗಳು ಆರಂಭಗೊಂಡ ನಂತರ ನಟನಾ ಸಾಮರ್ಥ್ಯವುಳ್ಳ ಅನೇಕ ಕಲಾವಿದರಿಗೆ ಅವಕಾಶಗಳು ದೊರೆಯತೊಡಗಿದವು. ಟೆಲಿಚಿತ್ರ, ನಾಟಕ ಹಾಗೂ ಮೆಗಾ ಧಾರಾವಾಹಿಗಳು ಪ್ರಸಾರವಾದವು. ಖ್ಯಾತ ನಟ ಸೋಮಣ್ಣನಿಗೂ ಸಾಲುಸಾಲಾಗಿ ಆಹ್ವಾನ ಬಂದವು. ಬೆಂಗಳೂರು ದೂರದರ್ಶನದ ಮೊದಲ ಟೆಲಿನಾಟಕ "ಹಂಗು" ವಿನಲ್ಲಿ ಇವರು ಅಭಿನಯಿಸಿದರು. ಆನಂತರ ನಮ್ಮನಮ್ಮಲ್ಲಿ, ಶ್ರೀಮಾನ್ ಶ್ರೀಸಾಮಾನ್ಯ, ಪ್ರವೃತ್ತಿ ನಿವೃತ್ತಿ, ಮೇಲೂರು ಲಕ್ಷ್ಮಮ್ಮ, ನೀ ಬರೆದ ಪಾತ್ರ ನಾನಲ್ಲ ಮೊದಲಾದ ದೂರದರ್ಶನ ಧಾರಾವಾಹಿಗಳಲ್ಲಿ ಅಭಿನಯಿಸಿದರು. ಖ್ಯಾತ ನಿರ್ದೇಶಕ ಟಿ. ಎಸ್. ನಾಗಾಭರಣ ಅವರ ಮೆಗಾ ಧಾರಾವಾಹಿ "ಸಂಕ್ರಾಂತಿ"ಯಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿ ಜನಮನ ಗೆದ್ದಿದ್ದಾರೆ. ರವಿ ನಿರ್ದೇಶನದ "ಸೃಷ್ಟಿ" ಧಾರಾವಾಹಿಯಲ್ಲೂ ಸಹ ಸೋಮಣ್ಣ ನಟಿಸುತ್ತಿದ್ದಾರೆ.

## ಪ್ರಶಸ್ತಿ - ಪುರಸ್ಕಾರಗಳು

ರಂಗಕಲಾವಿದ, ಚಲನಚಿತ್ರ ನಟ, ಕಿರುತೆರೆಯ ಜನಪ್ರಿಯ ಕಲಾವಿದ ಸೋಮಣ್ಣ ತಮ್ಮ ಅಭಿನಯ ಕೌಶಲ್ಯಕ್ಕಾಗಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಗಳಿಸಿದ್ದಾರೆ. ರಸಿಕರಾದ ಜನ ಅವರನ್ನು ರಂಗಭೂಮಿಯ ಮೇಲೆ ಪ್ರತ್ಯಕ್ಷ ಕಂಡು ಚಪ್ಪಾಳೆ ತಟ್ಟಿ, ಸಿಳ್ಳೆ ಹೊಡೆದು ತಮ್ಮ ಅಭಿಮಾನವನ್ನು, ಆನಂದವನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಚಲನಚಿತ್ರ ಅಥವಾ ಟಿ. ವಿ. ಧಾರಾವಾಹಿಗಳಲ್ಲಿ ನೋಡಿ ಸಂತೋಷಪಟ್ಟು ಪತ್ರಿಕೆಗಳಿಗೆ ಬರೆದು ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ. ಬರ್ಕ್ಲಿ-ತರಂಗಿಣಿ ಸಂಸ್ಥೆಯವರು ಶ್ರೇಷ್ಠ ನಟ, ಶ್ರೇಷ್ಠ ಪೋಷಕ ನಟ-ನಟಿಯರ ಆಯ್ಕೆಗೆ ಅವಕಾಶ ನೀಡಿದಾಗ

ಸೋಮಣ್ಣನನ್ನು ೧೯೯೨ ರ ಶ್ರೇಷ್ಠ ಪೋಷಕ ನಟನಾಗಿ ಆಯ್ಕೆ ಮಾಡಿ ಪ್ರಶಸ್ತಿ ಬರುವಂತೆ ಮಾಡಿದರು. ಕರ್ನಾಟಕ ಸರ್ಕಾರ ೧೯೯೪ ರಲ್ಲಿ ಪ್ರತಿ ವರ್ಷ ನೀಡುವ ಅತ್ಯುತ್ತಮ ಪೋಷಕ ನಟ ಪ್ರಶಸ್ತಿಯನ್ನು ಅವರಿಗೆ ನೀಡಿ ಗೌರವಿಸಿತು.

ಸೋಮಣ್ಣ ರಂಗಭೂಮಿಗೆ ಸಲ್ಲಿಸಿರುವ ಮಹತ್ತರ ಸೇವೆಯನ್ನು ಪರಿಗಣಿಸಿ ಕರ್ನಾಟಕ ನಾಟಕ ಅಕಾಡೆಮಿಯು ೧೯೯೯ ರಲ್ಲಿ ಅವರಿಗೆ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿತು.

ಇಂಥ ಪ್ರಶಸ್ತಿಗಳಿಗಿಂತ, ಕೈಲಾಸಂ ಅಂದಂತೆ ನಾಟಕ ನೋಡುತ್ತಾ ಅವರಲ್ಲಿ ತನ್ಮಯರಾದ ಜನ ಕಿಲಕಿಲನೆ ನಕ್ಕು, ದುಃಖದ ಸನ್ನಿವೇಶ ಬಂದಾಗ ಗಳಗಳನೆ ಕಣ್ಣೀರ್ಗರೆದರೆ ಅದಕ್ಕಿಂತ ದೊಡ್ಡ ಪುರಸ್ಕಾರ ನಟನಿಗೆ ಇನ್ನಾವುದಿದ್ದೀತು ? ಕಲಾವಿದನಾಗಿ ಸೋಮಣ್ಣ ಅಂಥ ಸಹೃದಯ ಸ್ಪಂದನವನ್ನು ಬಾಚಿ ತುಂಬಿಕೊಳ್ಳುವಷ್ಟು ಪಡೆದು ಕೃತಕೃತ್ಯರಾಗಿದ್ದಾರೆ.

ತೃಪ್ತಿಯ ನಿವೃತ್ತ ಜೀವನವನ್ನು ಸಾಗಿಸಿರುವ ಸೋಮಣ್ಣ ಅಭಿನಯದ ಹವ್ಯಾಸದಿಂದ ದೂರವಾಗಿಲ್ಲ. ಅಭಿನಯ, ನಟನ ಕಲೆ ಅವರ ಜೀವದ ಜೀವ. ಅದು ತಾನು ಹುಟ್ಟಿ ಬೆಳೆದ ಸಮಾಜಕ್ಕೆ ನೀಡುವ ಕೃತಜ್ಞತೆಯ ಕಾಣಿಕೆಯೆಂದೇ ಅವರು ಭಾವಿಸಿದ್ದಾರೆ. ಈ ಕಾರಣದಿಂದಲೇ ಅವರು ನಟನೆ, ನಿರ್ದೇಶನಗಳ ಜೊತೆಗೆ ಸಾಂಸ್ಕೃತಿಕ ಸಂಘಟನೆಗಳ ಜೊತೆ ಸಂಪರ್ಕವಿರಿಸಿಕೊಂಡಿದ್ದಾರೆ. "ಅಭಿನಯ ತರಂಗ" ನಾಟಕ ಶಾಲೆಯ ಅಧ್ಯಕ್ಷರಾಗಿ, "ಸನ್ಮಿತ್ರ ಸಂಘ"ದ ಸ್ಥಾಪಕರಾಗಿ, "ಕಲಾಮಂದಿರ"ದ ಕಲಾಶಾಲೆಯ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾವು ರೂಢಿಸಿಕೊಂಡ ರಮ್ಯಕಲೆಯನ್ನು ಯುವಜನರಿಗೆ ಕಲಿಸುತ್ತಾ, ಅವರಿನ್ನೂ ನೂರ್ಕಾಲ ಬಾಳಿ ನಮ್ಮ ರಂಗಕಲಾರಂಗವನ್ನು ಶ್ರೀಮಂತಗೊಳಿಸಲಿ ಎಂಬುದು ಎಲ್ಲರ ಆಸೆ.

## ಸಂದರ್ಶನ : ಪ್ರಶ್ನೋತ್ತರ

ಕರ್ನಾಟಕ ನಾಟಕ ಅಕಾಡೆಮಿಯಿಂದ ಹೆಚ್. ಜಿ. ಸೋಮಶೇಖರರಾವ್ ಅವರ ಜೀವನ ಸಾಧನೆ ಕುರಿತು ಬರೆಯಬೇಕೆಂಬ ಕೋರಿಕೆ ಬಂದಾಗ ಅವರಿಗೆ ಫೋನು ಮಾಡಿ ಅವರ ಮನೆಯಲ್ಲಿ (೮೦, 'ಶ್ರೀನಿವಾಸ', ೨೩ ನೇ ಮುಖ್ಯ ರಸ್ತೆ, ಶ್ರೀನಗರ, ಬೆಂಗಳೂರು - ೫೦) ಭೇಟಿ ಮಾಡಲು ಸಮಯ ಗೊತ್ತುಮಾಡಿಕೊಂಡೆ. ಕೆಲವು ಮಾಹಿತಿಗಳನ್ನು ಅನುಭವಗಳನ್ನು ನೇರವಾಗಿ ಅವರ ಬಾಯಿಂದಲೇ ಕೇಳುವ, ಅವರ ನಾಟಕದ ಸಂಭಾಷಣೆಗಳನ್ನು ಧ್ವನಿ ಸುರುಳಿಯಲ್ಲಿ ದಾಖಲಿಸುವ ಉದ್ದೇಶದಿಂದ

ಒಂದು ಪ್ರಶ್ನಾವಳಿಯನ್ನೇ ಸಿದ್ಧಮಾಡಿಕೊಂಡು ಹೋಗಿದ್ದೆ. ತುಮಕೂರಿನ ಸರ್ಕಾರೀ ಕಾಲೇಜಿನಲ್ಲಿ ನಾನು ಅವರ ಸಹಪಾಠಿಯಾಗಿದ್ದೆ ಎಂಬ ಕಾರಣದಿಂದ ಆತ್ಮೀಯವಾಗಿ ನನ್ನೊಡನೆ ಮಾತುಕತೆಯಾಡುತ್ತಾ ತಮ್ಮ ವೈವಿಧ್ಯಪೂರ್ಣ ಅನುಭವಗಳನ್ನು ಹಂಚಿಕೊಂಡರು. ಕೆದಕಿ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದರು. ಅಂಥ ಕೆಲವು ಪ್ರಶ್ನೋತ್ತರಗಳು ಇಲ್ಲಿವೆ :

೧. ಬ್ಯಾಂಕೊಂದರ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ನೀವು ರಂಗಭೂಮಿ ಮತ್ತು ಚಲನಚಿತ್ರ ಚಟುವಟಿಕೆಗಳಿಗೆ ಸಮಯ ಹೇಗೆ ಹೊಂದಿಸಿಕೊಂಡಿರಿ; ವೃತ್ತಿ-ಪ್ರವೃತ್ತಿಗಳೆರಡನ್ನೂ ನೀವು ಸರಿದೂಗಿಸಿದ್ದು ಹೇಗೆ ?

"ಮನಸ್ಸಿದ್ದರೆ ಮಾರ್ಗ. ವೃತ್ತಿ ಹೊಟ್ಟೆ ಪಾಡಿಗೆ, ಪ್ರವೃತ್ತಿ ಮಾನಸಿಕ ಹಸಿವೆಗೆ. ನನ್ನ ಜೀವನೋಪಾಯಕ್ಕೆ ಆರಿಸಿಕೊಂಡ ವೃತ್ತಿಗೆ ನಿಷ್ಠೆಯಿಂದ ದುಡಿಯುತ್ತಾ ಬಿಡುವಿನ ವೇಳೆಯಲ್ಲಿ ಪ್ರವೃತ್ತಿಗೆ ಓಗೊಡುತ್ತಾ ಬಂದಿದ್ದೇನೆ. ಕಚೇರಿ ವೇಳೆಯನ್ನುಳಿದು, ಉಳಿದೆಲ್ಲಾ ಕಾಲವನ್ನು ಹಾಗೂ ರಜಾದಿನಗಳನ್ನು ನನ್ನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಳಸಿಕೊಂಡಿದ್ದೇನೆ. ೩೭ ವರ್ಷಗಳ ನನ್ನ ಸೇವಾವಧಿಯಲ್ಲಿ ಮಾಡಿದ್ದೇ ಇದು. ಇದರಿಂದ ನನಗೆ ವೈಯಕ್ತಿಕವಾಗಿ ತೊಂದರೆಯಾಗಿದೆ. ಇಲ್ಲವೆಂದಲ್ಲ. ಆದರೆ ಸಾಂಸ್ಕೃತಿಕ ರಂಗದ ಸುಖ ಅಂಥ ತೊಂದರೆಯನ್ನು ಕೂಡ ಹಗುರವಾಗಿಸಿದೆ."

೨. ನಾಟಕ ಮತ್ತು ಚಲನಚಿತ್ರ — ಈ ಎರಡರ ಜೋಡಿ ಕುದುರೆಸವಾರಿ ನಿಮ್ಮದು. ಇವೆರಡಲ್ಲಿ ಯಾವುದು ನಿಮಗೆ ಹೆಚ್ಚು ಇಷ್ಟವಾದದ್ದು ?

"ನನಗೆ ಮೊದಲ ಮತ್ತು ಕೊನೆಯ ಇಷ್ಟ ನಾಟಕವೇ. ಸಂಶಯವೇ ಬೇಡ. ಇವೆರಡೂ ಮನುಷ್ಯನಿಗೆ ಸಂತೋಷ ಕೊಡುವಂಥವೇ. ನಾಟಕದಲ್ಲಿ ನೇರವಾಗಿ ಪ್ರೇಕ್ಷಕನ ನಿಯಂತ್ರಣವಿರುತ್ತದೆ. ಸಿನಿಮಾದಲ್ಲಿ ಅದಿಲ್ಲ. ಅದು ಯಾಂತ್ರಿಕ. ಅಲ್ಲಿ ಪ್ರತಿಕ್ರಿಯೆಯನ್ನು ಕಾಣುತ್ತಾ ಅಭಿನಯಿಸಲಾಗುವುದಿಲ್ಲ. ಯಾವುದೇ ಪಾತ್ರವಿರಲಿ, ಆ ಪಾತ್ರದ ಗುಣಸ್ವಭಾವಗಳನ್ನು ತನ್ನಲ್ಲಿ ಆವಾಹನೆ ಮಾಡಿಕೊಂಡು ತಾದಾತ್ಮ್ಯದಿಂದ ಅಭಿನಯಿಸಬೇಕಾಗುತ್ತದೆ. ನಾಟಕದಲ್ಲಿ ನೋಡುವವರ ಪ್ರತಿಕ್ರಿಯೆಗಳು ಪೂರಕವಾಗಿರುತ್ತವೆ. ಈ ಕಾರಣದಿಂದಲೇ ನಾಟಕ ಹೆಚ್ಚು ಪ್ರಿಯವೆನಿಸುತ್ತದೆ."

೩. ನೀವು ಅನೇಕ ರಂಗನಾಟಕಗಳಲ್ಲಿ ಅಭಿನಯಿಸಿದ್ದೀರಿ. ಯಾವ ನಾಟಕದ ಪಾತ್ರ ನಿಮಗೆ ಹಿಡಿಸಿತು ?

"ಹೌದು, ನಾನು ಅನೇಕ ನಾಟಕಗಳಲ್ಲಿ ಪಾತ್ರ ಮಾಡಿದ್ದೇನೆ. ಜನರು ಅವುಗಳಿಗೆ ತೀವ್ರ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಹ್ಯಾಮ್ಲೆಟ್, ಮರ್ಚೆಂಟ್ ಆಫ್ ವೆನಿಸ್ ಇಂಗ್ಲಿಷ್ ನಾಟಕಗಳು, ಆಷಾಢಭೂತಿ, ಬಂಡವಾಳವಿಲ್ಲದ ಬಡಾಯಿ, ನನ್ನ ತಂಗಿಗೊಂದು ಗಂಡು ಕೊಡಿ, ಕದಡಿದ ನೀರು ಮೊದಲಾದವು

ನೆನಪಿಸಿಕೊಳ್ಳುವಂಥವು. ಇವುಗಳಲ್ಲಿ 'ಕದಡಿದ ನೀರು' ನಾಟಕದ ದೇಶಭಕ್ತ ಶಿವಪ್ಪನ ಪಾತ್ರ ನನಗೆ ತೃಪ್ತಿ ತಂದಿದೆ."

೪. ಚಲನಚಿತ್ರ ಕಲಾವಿದರಾಗಿಯೂ ನೀವು ಹೆಸರು ಮಾಡಿದ್ದೀರಿ. ಅವುಗಳಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು ?

"ನಾನು ಸಣ್ಣ ಪಾತ್ರದಿಂದ ಹಿಡಿದು ದೊಡ್ಡ ಪಾತ್ರದ ವರೆಗೆ ಅಭಿನಯಿಸಿದ ಚಿತ್ರಗಳ ಸಂಖ್ಯೆ ೬೦ ಕ್ಕೂ ಮಿಕ್ಕಿದೆ. ಜನರು "ಸಾವಿತ್ರಿ" ಚಿತ್ರದ ವಿಲನ್ ಪಾತ್ರ ದೇಸಾಯಿಯಿಂದ ಹಿಡಿದು "ಅಜಗಜಾಂತರ"ದ ತಮಾಷೆ ಪಾತ್ರದ ವರೆಗಿನ ನನ್ನ ಅಭಿನಯವನ್ನು ಜನ ಮೆಚ್ಚಿದ್ದಾರೆ. ಮಿಥಿಲೆಯ ಸೀತೆಯರು. ಹರಕೆಯ ಕುರಿ. ಸುಂದರ ಸ್ವಪ್ನಗಳು– ನನಗೆ ಕೀರ್ತಿ ತಂದಿವೆ. ಅವುಗಳಲ್ಲಿ ನನಗೆ ತೃಪ್ತಿ ತಂದದ್ದು ಮಿಥಿಲೆಯ ಸೀತೆಯರು ಚಿತ್ರದ ಬೇಜವಾಬ್ದಾರಿ ತಂದೆಯ ಪಾತ್ರ."

೫. ಸಿನಿಮಾ ಒಂದು ಕಡೆ. ದೂರದರ್ಶನ ಇನ್ನೊಂದು ಕಡೆ ನಾಟಕಗಳನ್ನು ಬದುಕಗೊಡುತ್ತವೆಯೆ ? ಮತ್ತೆ ನಾವು ನಮ್ಮ ಪರಂಪರೆಯ ನಾಟಕ ಕಂಪನಿಗಳ ಏಳಿಗೆಯನ್ನು ಕಾಣಲು ಸಾಧ್ಯವೆ ?

"ಈ ಕಂಪ್ಯೂಟರ್ ಯುಗದಲ್ಲಿ. ಇಂದಿನ ಸ್ಥಿತಿಯಲ್ಲಿ ನಾಟಕ ಉಳಿಯೋದು ಕಷ್ಟ. ಕಾಲದ ಮಹತ್ವ ಹಾಗಿದೆ. ಇದು ವೇಗದ ಯುಗ. ಎಲ್ಲರೂ ದಿಢೀರ್ ಫಲದ ನಿರೀಕ್ಷೆಯಲ್ಲಿದ್ದಾರೆ. ಇಡೀ ರಾತ್ರಿ ಕೂತು ನಾಟಕ ನೋಡುತ್ತಿದ್ದ ಕಾಲ ಒಂದಿತ್ತು. ಈಗ ಗಂಟೆಗಟ್ಟಲೆ ಕೂತು ನೋಡುವರಾರು ? ಹೇಳುವುದನ್ನು ಸಂಕ್ಷಿಪ್ತವಾಗಿ. ಸಾರವತ್ತಾಗಿ ಹೇಳಿ. ಮಾಡುವುದನ್ನು ಬೇಗ ಪರಿಣಾಮಕಾರಿಯಾಗಿ ಮಾಡಿ ಮುಗಿಸಬೇಕು. ಅಂದರೆ ನಾಟಕಗಳನ್ನು ಸಾದರಪಡಿಸುವಲ್ಲಿಯೂ ಸುಧಾರಣೆ ಅಗತ್ಯ. ಕಾಲೋಚಿತ ಬದಲಾವಣೆಗಳೂ ಅಗತ್ಯ.

"ನಾಟಕ ಮಂದಿರಗಳಿಗೆ ಹೋಗುವುದು ಜನರಿಗೆ ಸಹಜ ಅಭ್ಯಾಸವಾಗಬೇಕು. ಅಂಥ ಪ್ರಬಲ ಆಕರ್ಷಣೆಯನ್ನು ಪ್ರದರ್ಶನಗೊಳ್ಳುವ ನಾಟಕ ಹೊಂದಿರಬೇಕು. ನಾನು ಲಂಡನ್‌ಗೆ ಹೋಗಿದ್ದಾಗ ಷೇಕ್ಸ್‌ಪಿಯರ್ ನಾಟಕ ಪ್ರದರ್ಶನವನ್ನು ನೋಡಿದೆ. ಅಲ್ಲಿ ನಾಟಕಗಳ ಬಗ್ಗೆ ಜನರಲ್ಲಿ ಗೌರವ ಭಾವನೆಯಿದೆ. ನಟರಿಗೆ ಸಾಮಾಜಿಕವಾಗಿ ಒಳ್ಳೆಯ ಸ್ಥಾನಮಾನಗಳಿವೆ. ಜನರಲ್ಲಿ ತಮ್ಮ ನಾಟಕಗಳ ಬಗ್ಗೆ ಅಭಿಮಾನವಿದೆ. ಬದ್ಧತೆಯಿದೆ. ಅಲ್ಲಿ ನಿರಂತರ ಸುಧಾರಿತ ತಂತ್ರಗಳನ್ನು ನಾಟಕಗಳಲ್ಲಿ ಅಳವಡಿಸಿಕೊಳ್ಳುವ ಪರಿಪಾಠವಿದೆ. ಹೀಗಾಗಿ ನಾಟಕಗಳು ಜನರಿಗೆ ಹಿಡಿಸುತ್ತಿವೆ.

"ನಮ್ಮ ರಂಗಭೂಮಿ ಕಾಲೋಚಿತ ಸುಧಾರಣೆಗಳನ್ನು ಹೊಂದಿ ಜನರಿಗೆ ಪ್ರಿಯವಾಗಬೇಕು. ನಾಟಕ ರಚನೆ ಮತ್ತು ಪ್ರಯೋಗಗಳಲ್ಲಿ ಸಂಸ್ಕರಣಕ್ರಿಯೆ. ನವ್ಯ ಪ್ರಯೋಗಗಳ ಅಳವಡಿಕೆ ನಮ್ಮಲ್ಲೂ ಆಗಬೇಕು. ಶಿವರಾಮ ಕಾರಂತರು ಯಕ್ಷಗಾನ

ನಾಟಕಗಳಲ್ಲಿ ನಡೆಸಿದ ನವ್ಯ ಪ್ರಯೋಗಗಳಿಂದಾಗಿ ಅದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡು ಎಲ್ಲರಿಗೂ ಪ್ರಿಯವಾಗಲು ಕಾರಣವಾಯಿತಲ್ಲವೆ ?

"ರಂಗಭೂಮಿ ಚಿರಾಯು; ಅದು ನಿರಂತರವಾಗಿ ಉರಿಯುವ ದೀಪ. ಬದಲಾಗುತ್ತಿರುವ ಕಾಲಕ್ಕೆ ತಕ್ಕ ಹಾಗೆ ಅದರಲ್ಲಿ ಸುಧಾರಣೆಗಳನ್ನು ತಂದು ಅದು ಕಲಾಭಿವ್ಯಕ್ತಿ ಸಾಧನವೂ, ಸಹೃದಯರ ಹೃದಯ ಸಂವೇದ್ಯವೂ ಆಗುವಂತೆ ಬಳಸಬೇಕು."

೬. ಇಂದಿನ ಸಿನಿಮಾ ಎತ್ತ ಸಾಗಿವೆ ? ಅವು ಜನರಲ್ಲಿ ಸದಭಿರುಚಿಯನ್ನು ಬೆಳೆಸುತ್ತಿವೆಯೆ ? ನಾಡಿನ ಬಗ್ಗೆ ಅಭಿಮಾನ ಮೂಡಿಸಿ, ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿವೆಯೆ ?

"ಅಭಿನಯ ಕಲೆಯ ಅಭಿವ್ಯಕ್ತಿ ಮಾಧ್ಯಮವಾಗಿ ಸಿನಿಮಾ ಇಂದು ಬಹು ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಇದು ಹಣಗಳಿಕೆಯ ದಂಧೆಯಾಗಿದೆ. ಇದೊಂದು ಶಕ್ತಿಯುತವಾದ ಮಾಧ್ಯಮ. ಆದರೆ ಇಂದಿನ ಸಿನಿಮಾಗಳು ಹಿಡಿದಿರುವ ದಾರಿ ಅಷ್ಟು ಆರೋಗ್ಯಕರವಾಗಿಲ್ಲ. ಬಹುಮಟ್ಟಿಗೆ ಅವು ಪರಸಂಸ್ಕೃತಿಯ ಪ್ರಭಾವಕ್ಕೆ ಒಳಗಾದವು. ಎಲ್ಲಾ ಎರವಲು. ಅದರ ವೈಭವೀಕರಣ. ಅನುಕರಣೆ ಮಾಡಲಿ; ಅದು ತಾಂತ್ರಿಕ ಅಂಶಗಳಲ್ಲಿ, ನಾವೀನ್ಯದ ದೃಷ್ಟಿಯಿಂದ ಉಪಯುಕ್ತವೆನಿಸುವ ರೀತಿನೀತಿಗಳಲ್ಲಿ. ಆದರೆ ನಮ್ಮತನವನ್ನು, ಪ್ರಾದೇಶಿಕ ವೈಶಿಷ್ಟ್ಯಗಳನ್ನು, ಮಣ್ಣಿನ ವಾಸನೆಯ ಸೊಗಡನ್ನು ಬಿಡಬಾರದು. ಉದಾಹರಣೆಗೆ ಮಲಯಾಳಂ ಚಿತ್ರಗಳನ್ನು ನೋಡಿ. ಅವರು ತಮ್ಮ ನಾಡಿನ ನಿಸರ್ಗವನ್ನು, ವಿಶಿಷ್ಟ ಆಚರಣೆಗಳನ್ನು, ಅವರದೇ ಆದ ಸಂಸ್ಕೃತಿಯ ಛಾಪನ್ನು ತಪ್ಪದೆ ಚಲನಚಿತ್ರಗಳಲ್ಲಿ ಅಳವಡಿಸುತ್ತಾರೆ. ಅದರಂತೆ ನಮ್ಮ ಚಿತ್ರಗಳು ಪ್ರಾದೇಶಿಕತೆಯ ವೈಶಿಷ್ಟ್ಯವನ್ನು, ಕನ್ನಡತನದ ಸ್ಪರ್ಶವನ್ನು ಎಷ್ಟು ಹೊಂದಿವೆ ? ಅಗ್ಗದ ಜನಪ್ರಿಯತೆಯನ್ನು ಬಯಸಿ ನಮ್ಮತನವೇ ಇಲ್ಲದ ಚಿತ್ರ ನಿರ್ಮಿಸಿದರೆ ಅದರಿಂದ ನಾಡಿಗೇನು ಲಾಭ ?"

೭. ನಮ್ಮ ನಾಟಕ ರಂಗದಲ್ಲಿ ಹೊಸ ಅಲೆಯೊಂದು ಎದ್ದಿದೆ. ನವ್ಯಪ್ರಯೋಗಗಳು ಆಗುತ್ತಿವೆ. ಈ ಬಗ್ಗೆ ನಿಮಗೇನು ಅನ್ನಿಸುತ್ತದೆ ?

"ನಮ್ಮ ರಂಗಕರ್ಮಿಗಳು, ನಾಟಕ ಕರ್ತೃಗಳು ಬೇರೆ ಭಾಷೆಗಳಲ್ಲಿರುವ ನಾಟಕಗಳನ್ನು ಓದಿ, ಜಗತ್ತಿನ ಬೇರೆ ಬೇರೆ ರಂಗಭೂಮಿಯ ಪ್ರಯೋಗಗಳನ್ನು ಗಮನಿಸಿ, ಅಲ್ಲಿನ ಹೊಸ ಅಂಶಗಳನ್ನು ನಮ್ಮ ನಾಟಕದಲ್ಲಿ ಅಳವಡಿಸಲು ಪ್ರಯತ್ನಿಸುತ್ತಾ ಬಂದಿದ್ದರು. ನೇರವಾಗಿ ಕೆಲವು ಇಂಗ್ಲಿಷ್ ನಾಟಕಗಳನ್ನು ಆಡಿದರು; ಕನ್ನಡ ಅವತರಣಿಕೆಗಳನ್ನು ರಂಗದ ಮೇಲೆ ತಂದರು.

"ಸಂಭಾಷಣೆಯಲ್ಲಿ, ಬೆಳಕಿನ ಸಂಯೋಜನೆಯಲ್ಲಿ, ವಾದ್ಯಗಳನ್ನು ಬಳಸಿ, ಹಿನ್ನೆಲೆ ಸಂಗೀತ ಒದಗಿಸುವ ಮೂಲಕ ಹೊಸತನವನ್ನು ತೋರಿ, ಸುಧಾರಿಸಿದ ರಂಗಪರಿಕರಗಳನ್ನು ಬಳಸಿ ನಾಟಕ ಆಡಿ ತೋರುತ್ತಿದ್ದಾರೆ. ಮಾತಿಲ್ಲದೆ

ಮನವನಲ್ಲಾಡಿಸುವ ನಟನೆ ಸಾಧ್ಯವೆಂಬುದನ್ನು ತೋರಿಸುತ್ತಿದ್ದಾರೆ. ಹತ್ತು ಮಾತಿನಲ್ಲಿ ಕಟ್ಟಿಕೊಡಬಹುದಾದ ಅನುಭವವನ್ನು ಒಂದು ಆಂಗಿಕ ಅಭಿನಯ ಹೇಳಲು ಸಾಧ್ಯ. ಅದು ಸರಿ. ಆದರೆ ಪ್ರೇಕ್ಷಕರು ಬುದ್ಧಿವಂತರಲ್ಲದಿದ್ದರೆ ಇಂಥ ನವೀನ ನಾಟಕ ಅವರನ್ನು ತಲುಪುವುದಿಲ್ಲ. ಆದ್ದರಿಂದ ದೃಶ್ಯಾವಳಿಗಳು. ವಿವಿಧ ಪೋಷಾಕುಗಳಿಲ್ಲದ ಸಾದಾ ನಾಟಕಗಳು ಜನ ಸಾಮಾನ್ಯರನ್ನು ಮುಟ್ಟದೇ ಹೋಗುವ ಸಾಧ್ಯತೆಗಳಿವೆ. ಇಂಥ ನಾಟಕಗಳನ್ನು ನೋಡುವ ಪ್ರೇಕ್ಷಕರಿಗೂ ತರಬೇತಿ ಬೇಕೇನೋ !"

೮. ನಿಮ್ಮ 'ಸೋಮಣ್ಣನ ಸ್ಟಾಕ್' ಒಂದು ವಿಶಿಷ್ಟ ಕೃತಿ. ಹಾಸ್ಯಮಿಶ್ರಿತ ಶೈಲಿಯಲ್ಲಿ ನಿಮ್ಮ ವೈವಿಧ್ಯಮಯವಾದ ಅನುಭವವನ್ನು ಅದು ನಿರೂಪಿಸುತ್ತದೆ. ಒಳ್ಳೆಯ ಶೈಲಿಯಿದೆ, ವಿಷಯ ಪ್ರತಿಪಾದನೆ ಮನ ಮುಟ್ಟುವಂತಿದೆ. ನಿಮಗೆ ಸಾಹಿತ್ಯ ಒಲಿದಿದೆ. ಅಂದ ಮೇಲೆ ನಿಮ್ಮಿಂದ ಇನ್ನೂ ಹೆಚ್ಚಿನ ಸಾಹಿತ್ಯ ಕೃತಿಗಳನ್ನು ನಿರೀಕ್ಷಿಸುವುದು ಸಹಜವಾಗಿದೆ. ನೀವು ಸಾಹಿತ್ಯ ಕೃಷಿಯನ್ನು ಮುಂದುವರಿಸುತ್ತೀರಾ ?

"ಮನಸ್ಸಿದೆ. ವಸ್ತುವಿಗೇನೂ ಕೊರತೆಯಿಲ್ಲ. ನಾನು ಮುಂದೆ ಬರೆಯುವುದಾದರೆ ಶ್ರೀಸಾಮಾನ್ಯರ ಬದುಕನ್ನು ಕುರಿತು ಬರೆಯಬೇಕೆನ್ನಿಸಿದೆ. ಎಂದೂ ಬೆಳಕಿಗೆ ಬಾರದ, ಆದರೆ ತಮ್ಮ ಕಾಯಕನಿಷ್ಠೆ, ಪ್ರಾಮಾಣಿಕತೆ, ಕಾರ್ಯಕಷ್ಟದ ಜೀವನ, ದೇವರ ಬಗೆಗಿನ ಶ್ರದ್ಧೆಗಳಿಂದ ಎಲೆ ಮರೆಯ ಕಾಯಂತೆ ಬದುಕುವವರ ಮೌಲಿಕ ಜೀವನವನ್ನು ಪರಿಚಯಿಸಬೇಕೆಂದಿದ್ದೇನೆ. ಯಾವುದಕ್ಕೂ ಕಾಲ ಕೂಡಿಬರಬೇಕು."

೯. ನಾಟಕ ಅಕಾಡೆಮಿಯ ಕಾರ್ಯ ವೈಖರಿಯ ಬಗ್ಗೆ ನಿಮ್ಮ ಅನಿಸಿಕೆಯೇನು ? ಯಾವುದೇ ಸಮಿತಿ, ಸಂಘಟನೆ ಕಾವ್ಯ ರಚಿಸಲು ಸಾಧ್ಯವೇ ?

"ಅದು ಒಬ್ಬೊಬ್ಬನ ಚಿಂತನೆಯ ಫಲ ! ವಾಙ್ಮಯ ತಪಸ್ಸಿನ ಫಲ ! ಈ ಮಾತು ಎಲ್ಲಾ ಕಲಾಭಿವ್ಯಕ್ತಿ ಶಕ್ತಿಗೂ ಅನ್ವಯಿಸುತ್ತದೆ. ನಾಟಕ ಕಲೆಗೆ ಸರ್ಕಾರದ ಪ್ರೋತ್ಸಾಹ ಬೇಕು, ನಿಜ. ಹಿಂದೆ ರಾಜ-ಮಹಾರಾಜರು ಮಾಡುತ್ತಿದ್ದ ಕೆಲಸವನ್ನು ಪ್ರಜಾಸತ್ತೆಯ ಸರ್ಕಾರ ಮಾಡುತ್ತಿದೆ. ಆದರೆ ತಾನೇ ರಂಗಕಲೆಯ ಮೇಲೆ ಅಧಿಕಾರ ಚಲಾಯಿಸಬಾರದು. ಸಾಂಸ್ಕೃತಿಕ ವೈಭವವೆಂಬುದು ಮೂಲ ಪ್ರವೃತ್ತಿ. ಅದು ಅಭಿವ್ಯಕ್ತಗೊಳ್ಳಲು ಅಗತ್ಯವಾದ ಸನ್ನಿವೇಶ ನಿರ್ಮಾಣ ಮಾಡುವುದು. ಅದರಿಂದ ಮೂಡುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದಷ್ಟೆ ಅದರ ಕೆಲಸವಾಗಬೇಕು.

"ನಾಟಕ ಅಕಾಡೆಮಿಯು ಸರ್ಕಾರದ, ಜನತೆಯ ಪ್ರತಿನಿಧಿಯಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಪ್ರತಿ ಜಿಲ್ಲಾ ಕೇಂದ್ರ, ತಾಲ್ಲೋಕು ಕೇಂದ್ರಗಳಲ್ಲಿ ನಾಟಕ ರಂಗಗಳು ಇದ್ದರೆ ನಾಟಕ ಕಲೆ ಬೆಳೆಯಲು ಮೂಲಭೂತ ನೆಲೆ ಸಿಕ್ಕಿದಂತಾಗುತ್ತದೆ. ಇರುವ ರಂಗಮಂದಿರಗಳು ಉಪಯೋಗವಾಗುತ್ತಿಲ್ಲ. ಹಳ್ಳಿಯ ಜನರಿಗೆ, ಗುಡ್ಡಗಾಡು ಜನಕ್ಕೆ ನಾಟಕವಾಡಲು ಅವಕಾಶ, ಪ್ರೋತ್ಸಾಹ ಬೇಕು.

ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಅವರ ಪ್ರತಿಭೆಗಳನ್ನು ಗುರುತಿಸುವ, ಸಂಸ್ಕರಿಸಿ ಪ್ರೋತ್ಸಾಹಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

"ಪ್ರತಿಭೆಗಳನ್ನು ಗುರುತಿಸಲು ಮೊದಲಿಗೆ ಸಮಗ್ರ ಮಾಹಿತಿ ಸಂಗ್ರಹವಾಗಬೇಕು. ನಟರಷ್ಟೇ ಅಲ್ಲ, ವಿವಿಧ ರಂಗಕರ್ಮಿಗಳ – ಹಾಡುಗಾರರು, ವಾದನಕಾರರು, ನೃತ್ಯಗಾರರು ಮೊದಲಾದವರ ಪಟ್ಟಿ ಸಿದ್ಧವಾಗಬೇಕು. ಕಮ್ಮಟಗಳ ಮೂಲಕ, ವಿಚಾರ ಸಂಕಿರಣಗಳ ಮೂಲಕ, ನಿಯತ ತರಬೇತಿ ನೀಡುವ ಮೂಲಕ, ನಾಟಕ ಪ್ರಯೋಗಗಳನ್ನು ನಡೆಸುವ ಮೂಲಕ ಅಂಥ ಉದಯೋನ್ಮುಖರ ಅರಳುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಬೇಕು. ಅನಂತರ ನಾಡಿನ ಒಳ-ಹೊರಗೆ ನಾಟಕ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಾ ಹೋಗಬೇಕು.

"ಇಂದಿನ ನಾಟಕ ಅಕಾಡೆಮಿ ಈ ದಿಸೆಯಲ್ಲಿ ರಚನಾತ್ಮಕ ಕೆಲಸಗಳನ್ನು ಮಾಡುತ್ತಿದೆ. ಈ ಬಗ್ಗೆ ನನಗೆ ತೃಪ್ತಿಯಿದೆ. ಅದರ ಕಾರ್ಯಗಳು ಮತ್ತಷ್ಟು ವ್ಯಾಪಕವಾಗಿ ಹಳ್ಳಿಗಾಡಿನ ಮೂಲೆಯಲ್ಲಿರುವ ಬಡಬೋರೇಗೌಡನಲ್ಲಿ ಹುದುಗಿರುವ ಕಲೆಗೆ ನೀರೆರೆದು ಬೆಳಕಿಗೆ ತರುವಂತಾಗಬೇಕು."

೧೦. ನಿಮ್ಮ ಕಲಾಸೇವೆ ನಿಮಗೆ ತೃಪ್ತಿ ತಂದಿದೆಯೆ ? ಒಬ್ಬ ನುರಿತ ರಂಗಕಲಾವಿದನಾಗಿ ನಿಮ್ಮ ಮುಂದಿನ ಯೋಜನೆಗಳೇನು ?

"ಕಲೆಯೆಂಬುದು ದೈವಾಯತ್ತ. ಅದು ಕಲಿಕೆಯಿಂದ ರೂಢಿಸಿಕೊಂಡದ್ದಾದರೂ ಸ್ವಂತ ಆಸ್ತಿಯಲ್ಲ. ನನಗೆ ಮಾತು, ಬರವಣಿಗೆ, ಅಭಿನಯ ಇವೆಲ್ಲವೂ ಸಮಾಜದಿಂದ ಬಂದುವು. ಕಲೆಯು ಸಮಾಜದ ಆಸ್ತಿ. ಕಲಾವಿದ ಸಮಾಜಕ್ಕೆ ಋಣಿಯಾಗಿ ಆ ಕಲೆಯನ್ನು ಸಮಾಜಕ್ಕೇ ಅರ್ಪಿಸಬೇಕು. ಆಗ ಆತ ಕೃತಕೃತ್ಯ. ಇಂಥ ಪುಣ್ಯ ಕಾರ್ಯದಲ್ಲಿ ಯಥಾಶಕ್ತಿ ತೊಡಗಿದ ನಾನು ಇದರಲ್ಲಿ ಪರಿಪೂರ್ಣ ತೃಪ್ತಿ ಹೊಂದುವುದು ಹೇಗೆ ಸಾಧ್ಯ ? ಏನೋ ಅಳಿಲು ಸೇವೆ ಮಳಲ ಭಕ್ತಿ ಎಂಬಂತೆ ನನ್ನ ಇತಿಮಿತಿಗಳ ನಡುವೆ ಕಲಾಸೇವೆ ಮಾಡಿದ್ದೇನೆ.

"ಈಗ ನಾನು 'ದೃಷ್ಟಿ' ದೂರದರ್ಶನ ಧಾರಾವಾಹಿಯ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ಅದು ವಿಶಿಷ್ಟ ರೀತಿಯಲ್ಲಿ ಬರುತ್ತಿದೆ. ನಮ್ಮ ಭಾಷೆಯ ಶ್ರೀಮಂತಿಕೆಯನ್ನು ವೈಶಿಷ್ಟ್ಯಗಳನ್ನು ಬಿಂಬಿಸುವಂತೆ ಭಾಷೆಯ ಶುದ್ಧವಾದ ಉಚ್ಚಾರಣೆಯ ಕಡೆಗೆ ಗಮನ ನೀಡಲಾಗುತ್ತಿದೆ. ಅಲ್ಲದೆ ಸ್ವಚ್ಛವಾದ, ಆರೋಗ್ಯಕರವಾದ ಆಲೋಚನೆಗಳಿಗೆ ಅವಕಾಶ ಕೊಡುವಂಥ ನಿರೂಪಣೆ ಅದರಲ್ಲಿದೆ.

"ಇದಲ್ಲದೆ ದಾಸರನ್ನು ಕುರಿತ ಒಂದು ಚಿತ್ರ ತಯಾರಿಸುವ ಆಲೋಚನೆಯಿದೆ. ಅದರಲ್ಲಿ ಜಾತಿ ಮತ ಪಂಥ, ವರ್ಣ ವರ್ಗಗಳ ಅಂತರದಿಂದ ಮೇಲೆದ್ದು ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ದೃಷ್ಟಿಯಿದೆ. ಆ ಮೇಲೆ ವೃದ್ಧಾಪ್ಯದ ಸಮಸ್ಯೆಗಳನ್ನು ಕುರಿತ ಒಂದು ಚಿತ್ರ ಮಾಡುವ ಸಂಕಲ್ಪವಿದೆ. ಏಕೆಂದರೆ ಅವಿಭಕ್ತ ಕುಟುಂಬಗಳಿದ್ದಾಗ

ವೃದ್ಧರದು ಸಮಸ್ಯೆಯೇ ಆಗಿರಲಿಲ್ಲ. ಆಧುನಿಕ ಕಾಲದಲ್ಲಿ, ಅದರಲ್ಲೂ ನಗರ ಪ್ರದೇಶಗಳಲ್ಲಿ ಗಂಡ - ಹೆಂಡತಿಯರಿಬ್ಬರೂ ದುಡಿಯಲು ಹೋಗುವ ಸನ್ನಿವೇಶದಲ್ಲಿ ವೃದ್ಧರದು ಮಹಾಸಮಸ್ಯೆ ಈ ಕಾರಣದಿಂದಲೇ ವೃದ್ಧಾಶ್ರಮಗಳು ಹೆಚ್ಚುತ್ತಿವೆ; ಭರ್ತಿಯಾಗುತ್ತಿವೆ ! ಈ ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಅದರಲ್ಲಿರಬೇಕಾಗುತ್ತದೆ.''

೧೧. ಕಲಾರಂಗದ ಹಿರಿಯಣ್ಣನಾಗಿ ಯುವ ಕಲಾವಿದರಿಗೆ ನಿಮ್ಮ ಕಿವಿಮಾತೇನು ?

''ನಮ್ಮ ಯುವ ಕಲಾವಿದರಿಗೆ ನಾನು ಹೇಳಬಯಸುವ ಒಂದೇ ಒಂದು ಕಿವಿ ಮಾತಿದೆ. ಅದು ಅವರಿಗೆ ಎಚ್ಚರಿಕೆ ಗಂಟೆಯೂ ಹೌದು. ಸಿದ್ಧಿಯಿಲ್ಲದೆ ಪ್ರಸಿದ್ಧಿಗೆ ಹಾತೊರೆಯಬೇಡಿ. ಸಾಧನೆ ಮುಖ್ಯ. ಅದಕ್ಕೆ ತಕ್ಕ ಸಿದ್ಧತೆಯೂ ಬಹಳ ಮುಖ್ಯ. ಅಂಥ ನಿರಂತರ ಸಾಧನೆಯಿಂದ ಸಿದ್ಧಿ. ಸಿದ್ಧಿಯಾದ ಮೇಲೆ ಪ್ರಸಿದ್ಧಿ, ಪ್ರಶಸ್ತಿ ತಾನೇ ಬರುತ್ತವೆ. ನಾಟಕದಲ್ಲೋ, ಸಿನಿಮಾದಲ್ಲೋ, ಸಂದಿಯಲ್ಲೋ ಮುಖ ತೋರಿಸಿ 'ನಾನೊಬ್ಬ ನಟ' ಎಂದರೆ ಹೇಗೆ ? ಪ್ರಾಮಾಣಿಕವಾದ ಪ್ರಯತ್ನಶೀಲತೆ ಬೇಕು. ಕಲಾಸಿದ್ಧಿ ತಪಸ್ಸನ್ನು ನಿರೀಕ್ಷಿಸುತ್ತದೆ. ಪರಿಶ್ರಮವಿಲ್ಲದೆ ಸಿದ್ಧಿ ಹೇಗೆ ಸಾಧ್ಯ ?

''ಸಾಧನೆಯ ಹಾದಿಯಲ್ಲಿ ಎಡಹುಗುಳಿಗಳ ದಾಟಿ ಪರಿಪೂರ್ಣತೆಯತ್ತ ಸಾಗುವ ಮನಸ್ಸು, ನಿರಂತರ ಪ್ರಯತ್ನ ಕಲಾವಿದನದಾದರೆ. ಸಿದ್ಧಿ ತಾನೇ ಬರುತ್ತದೆ. ಮುಂದಿನದು ಅವನನ್ನು ಹುಡುಕಿಕೊಂಡು ಬರುತ್ತದೆ. ಇದನ್ನು ನಮ್ಮ ಯುವಕ - ಯುವತಿಯರು ತಿಳಿದು ದಿಢೀರ್ ಖ್ಯಾತಿ ಬಯಸದೆ ಕಲಾಸೇವೆಯಲ್ಲಿ ತೊಡಗಬೇಕು.''



" ಕದಡಿದ ನೀರು " ನಾಟಕದಲ್ಲಿ ಶ್ರೀಮತಿ ಭಾರ್ಗವಿ ನಾರಾಯಣ್ ಮತ್ತು
ಹೆಚ್. ಜಿ. ಸೋಮಶೇಖರರಾವ್ : ಪ್ರಸನ್ನ




" ಜೋಕುಮಾರ ಸ್ವಾಮಿ " ನಾಟಕದಲ್ಲಿ ಗೌಡರಾಗಿ




ಒಂದು ಹಾಸ್ಯ ನಾಟಕದಲ್ಲಿ ಸೋಮಶೇಖರರಾವ್ (ಬಲಗಡೆ ಕೊನೆಗೆ)



" ಸೃಷ್ಟಿ " ಧಾರಾವಾಹಿಯಲ್ಲಿ ಸೋಮಶೇಖರರಾವ್







ಕುಟುಂಬದವರೊಂದಿಗೆ ಸೋಮಶೇಖರರಾವ್ –
ಕುಳಿತಿರುವವರು : ಸೋಮಣ್ಣ, ತಾಯಿ ತಿರಕಮ್ಮ, ಹೆಂಡತಿ ಲಲಿತಾ; ನಿಂತಿರುವವರು : ಹಿರಿಯಮಗ ಪ್ರಸನ್ನ, ಸಹೋದರ ದತ್ತಾತ್ರೇಯ, ಕಿರಿಯ ಮಗ ವಿವೇಕಾನಂದ



ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಸ್ವೀಕಾರ
ಸಚಿವರಾದ ರಾಣಿ ಸತೀಶ್ ಮತ್ತು ಕಾಶ್ಯಪ್ಪನವರಿಂದ : ೨೭-೧೨-೧೯೯೯




ಸೋಮಣ್ಣ, ಮುಖ್ಯಮಂತ್ರಿ ಚಂದ್ರು ಮತ್ತು ಎಂ. ಎಸ್. ಸತ್ಯು
೨೬-೧೨-೧೯೯೯, ವಿಜಾಪುರದಲ್ಲಿ




ದಂಪತಿಗಳಿಗೆ ಸನ್ಮಾನ



ಕರ್ನಾಟಕ ಸರಕಾರದಿಂದ 'ಶ್ರೇಷ್ಠ ಪೋಷಕ ನಟ' ಪ್ರಶಸ್ತಿ ಸನ್ಮಾನ
ಎಡದಿಂದ ಬಲಕ್ಕೆ : ಶಿವಮೊಗ್ಗ ಸುಬ್ಬಣ್ಣ, ಡಾ. ಲಕ್ಷ್ಮೀ ನಾರಾಯಣ ಭಟ್ಟ. ಪ್ರೊ. ಬಿ. ಕೆ. ಚಂದ್ರಶೇಖರ್, ಜಿ. ವಿ. ಅಯ್ಯರ್. ಹೆಚ್. ಜಿ. ಸೋಮಶೇಖರರಾವ್. ವೈ. ಎನ್. ಕೆ, ರವೀ



ಜಿ. ವಿ. ಅಯ್ಯರ್ ಅವರಿಂದ ಅಭಿನಂದನೆ

# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀರ ಝಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಅರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ